ered No. M. 1393. ಲ ಪುಟ ಕಾಲಾಣೆ

ಕಂಠೀರವ
KANTEERAVA

KANARESE, BI-WEEKLY

ESTD. 1919 ಸ್ಥಾಪನೆ.

ಸಂಪುಟ ೨೩ | ಮಂಗಳೂರು, ೧೯ಳಗನೇ ಇಸವಿ ಸಪ್ಟಂಬರ ತಾರೀಕು ೧೯ನೇ ಶುಕ್ರವಾರ | ಸಂಚಿಕೆ ೫೦
VOL. XXIII | MANGALORE, FRIDAY, SEPTEMBER 19, 1941 | NO. 50



ಮೆಡಿಟರೇನಿಯನಿನಲ್ಲಿ ಬ್ರಿಟಿಷ್ ಹಡಗುಗಳ ಓಡಾಟ

ವಿಮಾನಗಳನ್ನು ಸಾಗಿಸುವ ಒಂದು ಹಡಗೂ (ಮಧ್ಯದಲ್ಲಿ) ಮೆಡಿಟರೇನಿಯನ್ ನೌಕಾ ಬಲದ ಇತರ ಹಡಗುಗಳೂ ತಮ್ಮ ಹಾದಿಯನ್ನು ಸರಿಪಡಿಸಿಕೊಂಡು ಮುನ್ನುಗ್ಗುತ್ತಿವೆ. ಹೀಗೆ ಜಗತ್ತಿನ ಸ್ವತಂತ್ರ ಜನಾಂಗಗಳನ್ನು ಅಲ್ಲಿ ತಡೆಗಟ್ಟಲು ಬರುವ ಯಾವ ರಾಷ್ಟ್ರವನ್ನಾದರೂ ತಾನು ಪ್ರತಿಭಟಿಸಲು ಸಿದ್ಧವಾಗಿ ಬ್ರಿಟನು ಮೆಡಿಟರೇನಿಯನಿನಲ್ಲಿ ಯಾಜಮಾನ್ಯ ವಹಿಸಿ ನಿಂತಿದೆ.

ಬರ್ಮಾ ರೋಡಿನ ರಕ್ಷಣೆಗೆ ಅಮೆರಿಕದ ವಿಮಾನಗಳು

ಅಮೆರಿಕದ ಫೈಟರ್ ವಿಮಾನಗಳು, ಬರ್ಮಾ ರೋಡಿನ ರಕ್ಷಣೆಗಾಗಿ, ಬರ್ಮಾದ ವಿಮಾನ ನಿಲ್ದಾಣಗಳಲ್ಲಿ ಸಂಗ್ರಹವಾಗುತ್ತಿವೆ. ಐರಾವತಿ ನದಿಯಲ್ಲಿ ಅಮೆರಿಕದ ನಾನಾ ಯುದ್ಧ ಸಾಮಗ್ರಿಗಳು ಸಾಗುತ್ತಿವೆ. ಹೀಗೆ ಬರ್ಮಾ ದೇಶವು ಪೂರ್ವ ದಿಕ್ಕಿನ ಒಂದು ಮುಖ್ಯ ರಕ್ಷಣಾ ಪ್ರದೇಶವಾಗಿ ಪರಿಣಮಿಸಿದೆ; ಜಪಾನು ಇತ್ತ ಸುಳಿದಾಡಲು ಧೈರ್ಯಗೊಳ್ಳದಂತೆ, ರಾಯಲ್ ವಿಮಾನಬಲದ, ಅಮೇರಿಕದವರ, ಚೀನೀಯರ ನಾನಾ ಯಂತ್ರ ಸಾಧನಗಳು, ಪೈನಾನಿಕರೂ ಬಂದು ಅಲ್ಲಿ ತುಂಬುತ್ತಿದ್ದಾರೆಂದು ವಾರ್ತೆ.

ಇಟೆಲಿಯವರು ಜರ್ಮನರ ಸಹಾಯ ಕೇಳಿದ್ದಾರೆಯೇ?

ಉತ್ತರ ಆಫ್ರಿಕದಲ್ಲಿ ಅನುಕೂಲ ಹವಾಮಾನದ ಋತು ಸವಿೂಪಿಸುತ್ತಿರುವುದರಿಂದ, ಇಟೆಲಿಯವರಿಗೆ, ಶತ್ರು ದಾಳಿಯ ಭೀತಿ ಹಿಡಿದಿದೆ. ಈಜಿಪ್ಟಿನ ಕಡೆಯಿಂದ, ಬ್ರಿಟಿಶರ ದಾಳಿ ಉಂಟಾಗಬಹುದೆಂಬ ಸಂದೇಹದಿಂದ, ಇಟೆಲಿಯವರು ಲೀಬಿಯದಲ್ಲಿ ತಮ್ಮ ಸೇನಾ ಬಲವನ್ನು ಹೆಚ್ಚಿಸಿಕೊಂಡು, ಅದರ ಮೇಲೂ, ಜರ್ಮನರ ಸಹಾಯ ಕೇಳಿರುವರೆಂದೂ, ಹಿಟ್ಲರ್ ನನ್ನು ಮುಸಲೋನಿ ಈಚಿಗೆ ಭೇಟಿ ಮಾಡಿದ ಒಂದು ಉದ್ದೇಶವು ಇದೆಂದೂ, ಆದರೆ ಜರ್ಮನಿಯವರು ತಾವು, ಗ್ರೀಸ್ ಮತ್ತು ಕ್ರೀಟ್ ದಲ್ಲಿನ ವಿಮಾನಗಳ ಸಹಾಯವನ್ನು ಅಲ್ಲದೆ, ಇನ್ನಾವ ಸಹಾಯವನ್ನು ಕೊಡಲೂ ಆಗುವುದಿಲ್ಲವೆಂದು ತಿಳಿಸಿರುವರೆಂದೂ ಹೇಳಲಾಗಿದೆ. ಸದ್ಯ ಗ್ರೀಕ್ ವಿಮಾನನಿಲ್ದಾಣಗಳಲ್ಲಿ, ವಿಸ್ತರಣ ಕಾರ್ಯಗಳು ನಡೆಯುತ್ತಿವೆ; ಹೊಸ ನಿಲ್ದಾಣಗಳ ರಚನೆಯಾಗುತ್ತಿದೆ; ಈಜಿಪ್ಟನ್ನೂ, ಸುವೇಜ್ ಕಾಲಿವೆಯನ್ನೂ ಆಕ್ರಮಿಸಲು, ಈ ನಿಲ್ದಾಣಗಳಿಗೆ ೦೦ ಜರ್ಮನ್ ಬಾಂಬರುಗಳು ಹೊಸದಾಗಿ ಬಂದಿಳಿದಿವೆ ಎಂದೂ ತಿಳಿದುಬರುತ್ತಿದೆ.

To meet WAR TIME orders FIXED DEPOSITS IN CASH

repayable after 3, 6, 9, 12 & 24 months

at 4, 4½, 5, 6 & 7½% interest respectively (interest paid quarterly) are accepted by

CALICUT HOSIERIES, LTD.,

(ESTD. 1936) CHALAPURAM POST. (Malabar.)

List will remain open only for one month and will close immediately the required amount of Deposits are received.

Apply with 0—2—0 postage stamps for rules and application form at once to Managing Agents.

N. B. Special Rates for Deposits for sums over Rs. 5000/-

ನಿಮ್ಮ ಶ್ವಾಸಕ್ಕೆ ವಾಸನೆ ಇದ್ದರೆ ನೀವು ಆರೋಗ್ಯವನ್ನು ಅನುಭವಿಸಲಾರಿರಿ

ಅನುನಿತ್ಯವೂ ನಮ್ಮ ಯಕೃತ್ತಿನಿಂದ ಎರಡು ಪೈಂಟ್ ಪಿತ್ತದ ದ್ರವವು ಕರುಳೊಳಗೆ ಸುರಿಯುದಿದ್ದರೆ ನಮ್ಮ ಚಲನಗಳು ಘಟ್ಟಿಯಾಗಿ, ಮಲಬದ್ಧತೆಯುಂಟಾಗುತ್ತದೆ ಮತ್ತು ನಮ್ಮ ಆಹಾರವು ಅಸ್ವಾಭಾವಿಕವಾಗಿ ನಮ್ಮ 28 ಫೀಟಿನ ಕರುಳುಗಳಲ್ಲಿ ಹಾಳಾಗುತ್ತದೆ. ಈ ಹೊಲಸು ಪ್ರತಿ ಆರು ನಿಮಿಷಗಳಿಗೊಮ್ಮೆ ನಮ್ಮ ದೇಹದಲ್ಲೆಲ್ಲಾ ವಿಷವನ್ನು ಕಳುಹಿಸುತ್ತದೆ. ಅದು ನಮ್ಮನ್ನು ನ್ಯೂನಚಿತ್ತರನ್ನಾಗಿಯೂ, ಜಡಸ್ವಭಾವದವರನ್ನಾಗಿಯೂ ಯಾವದಕ್ಕೂ ಬಾರದವರನ್ನಾಗಿಯೂ ಮಾಡುತ್ತದೆ. ನಮ್ಮ ಮಿತ್ರರು ಈ ಹೊಲಸು ನಮ್ಮ ಬಾಯಿಯಿಂದ ಹೊರಡುವದನ್ನು ಅನುಭವಿಸಿ ಅದನ್ನು ದುರ್ವಾಸನಾಮಯವಾದ ಶ್ವಾಸವೆನ್ನುತ್ತಾರೆ. ಭೇದಿಯ ಮತ್ತು ಬಾಯಿ ಮುಕ್ಕಳಿಸುವ ಇತರ ಔಷಧಗಳು ಸ್ವಲ್ಪ ಮಟ್ಟಿಗೆ ಮಾತ್ರ ಸಹಾಯ ಮಾಡುವವು ಕಾರ್ಟರರ ಚಿಕ್ಕ ಲಿವರ್ ಮಾತ್ರೆಗಳನ್ನು ಸೇವಿಸಿ. ಅವುಗಳ ಎರಡು ಪೈಂಟ್ ಪಿತ್ತದ್ರವವು ಸರಾಗವಾಗಿ ಸುರಿಸುತ್ತವೆ. ಮತ್ತಾಗ ನೀವು 'ಇನ್ನೂ ಇನ್ನೂ' ಹುರುಪುಗೊಂಡವರಾಗುತ್ತೀರಿ. ಕಾರ್ಟರರ ಲಿಟ್ಲ್ ಲಿವರ್ ಪಿಲ್ಸ್ ಎಂಬ ಹೆಸರಿನಿಂದಲೇ ಕೇಳಿರಿ ಮತ್ತು ನೀವು ಕೇಳಿದುದನ್ನೇ ತೆಗೆದುಕೊಳ್ಳಿ. 41

ಸ್ಪಿಟ್ಸ್ ಬರ್ಗೆನಿನಲ್ಲಿ ಮಿತ್ರರು ಬಂದಿಳಿದುದೇಕೆ?

ಸ್ಪಿಟ್ಸ್ ಬರ್ಗೆನಿನಲ್ಲಿ, ಬ್ರಿಟಿಶ್, ಕೆನೆಡಿಯನ್ ಸೇನೆಗಳು ಬಂದಿಳಿದುದು, ಆ ಪ್ರಾಂತದ ಸಮೃದ್ಧವಾದ ಕಲ್ಲಿದ್ದಲು ಗಣಿಗಳು ಶತ್ರುಗಳ ಕೈವಶವಾಗಬಾರದೆಂಬುದಷ್ಟರಿಂದಲೇ ಅಲ್ಲ; ರಷ್ಯಕ್ಕೆ ಸಹಾಯಕೂಡುವ ಉದ್ದೇಶದಿಂದಲೂ ಈ ದಂಡಯಾತ್ರೆ ನಡೆದಿದೆ. ಈ ಪ್ರದೇಶದಿಂದ, ಇರಾನಿನ ಮೂಲಕ, ರಷ್ಯಕ್ಕೆ ಸಹಾಯ ಒದಗುವುದು ಸುಲಭವಾಗಿದೆ. ಶತ್ರುಗಳನ್ನು ಎರಡು ಕಡೆಗಳಲ್ಲಿ ಕಟ್ಟಿ ಹಾಕುವುದು ಸಾಧ್ಯವಿದೆ. ಇದರಿಂದ, ಮಿತ್ರರ ಮುಂದಿನ ಹೆಜ್ಜೆ ಎಲ್ಲಿಯೆಂದು ತಿಳಿಯಲಾರದೆ, ಶತ್ರುಗಳು ಬರೇ ಕಲ್ಪನೆಯಿಂದಲೇ ಕೆಲಸಮಾಡುವಂತಾಗಿದೆ.

ಫಿನ್‌ಲ್ಯಾಂಡು
ಕಾರ್ಲಿಯನ್ ಇಸ್ತ್ಮಮಸಿನಿಂದ ಹಿಂದೆಗೆಯಿತು

ಫಿನ್‌ಲ್ಯಾಂಡು ತನ್ನ ಸೇನೆಗಳಲ್ಲಿ ಹೆಚ್ಚಿನ ಭಾಗವನ್ನು ಕಾರ್ಲಿಯನ್ ಇಸ್ತ್ಮಮಸಿನಿಂದ ಹಿಂದೆಗೆಯಿತು. ಹಾಗೆ ಅಲ್ಲಿನ ಫಿನ್ನರ ಕಾದಾಟ ಮುಗಿಯಿತು. ಫಿನ್ನರು ತಮಗೆ ಬೇಕಾದ ಭಾಗಗಳನ್ನು ಆಕ್ರಮಿಸಿ, ಮುಂದೆ ಇಲ್ಲಿ ತಮಗೆ ಮುಂದುವರಿಸುವ ಅಗತ್ಯವಿಲ್ಲವೆಂದು ಸೂಚಿಸಿರುವರಾದರೂ, ರಷ್ಯದೊಡನೆ ಸಂಧಿ ಇಲ್ಲವಂತೆ ಫಿನ್‌ಲ್ಯಾಂಡಿಗೆ!

ಫಿನ್‌ಲ್ಯಾಂಡು ರಷ್ಯದೊಡನೆ ರಾಜಿಯಿಂದಿದ್ದ ೧೫ ತಿಂಗಳ ಕಾಲದಲ್ಲಿ ರಷ್ಯದವರು ಫಿನ್‌ಲ್ಯಾಂಡಿನ ಸ್ವಾತಂತ್ರ್ಯ ನಾಶಕ್ಕಾಗಿ ಹಲವು ರೀತಿಯ ಪ್ರಯತ್ನಗಳನ್ನು ನಡೆಸಿದರೆಂದು ಫಿನ್ನರ ಹೇಳಿಕೆ. ಅದಕ್ಕೆ ಪ್ರತಿಯಾಗಿ ತಾವು ಯುದ್ಧ ಹೂಡಿದೆವೆಂದೂ, ತಮ್ಮ ಗುರಿ ಕಾರ್ಲಿಯನ್ ಇಸ್ತ್ಮಮಸ್ ಎಂದೂ, ಅದು ಫಿನ್‌ಲ್ಯಾಂಡಿಗೆಂದೂ ಹೇಳಲಾಗಿದೆ. ಜತೆಯಲ್ಲಿಯೇ ಫಿನ್ನರಿಗೆ ನಾಜಿಗಳ ಲೆನೆನ್‌ಗ್ರಾಡಿನ ವಿರುದ್ಧವಾದ ಕಾದಾಟದಲ್ಲಿ ಆಸಕ್ತಿ ಏನೂ ಇಲ್ಲವೆಂದೂ ಪ್ರಕಟವಾಗಿದೆ. ಒಟ್ಟಿನಲ್ಲಿ ಫಿನ್‌ಲ್ಯಾಂಡಿಗೆ ಇನ್ನೂ ಆ ದೇಶದ ಜನಗಳ ಪ್ರಾಣವನ್ನು ಬಲಿಕೊಡಲು ಇಷ್ಟವಿಲ್ಲವಾಗಿ ತಿಳಿಯಬಹುದಾಗಿದೆ.

ಬಲ್ಗೇರಿಯದಲ್ಲಿ ನಾಜಿಗಳ ಚಟುವಟಿಕೆ

ಜರ್ಮನಿ,–ಒಡೆಸ, ಕ್ರಿಮಿಯ ಮತ್ತು ಕಾಕಸಸ್ಸುಗಳ ವಿರುದ್ಧ ಸಮುದ್ರ ಮಾರ್ಗವಾಗಿ ಮುನ್ನಡೆಯುವ ಯೋಜನೆಯಲ್ಲಿದೆ ಎಂಬುದು ಬಲ್ಗೇರಿಯಕ್ಕೆ ಜರ್ಮನಿ ಬರೆದ ಒಂದು ಓಲೆಯಿಂದ ತಿಳಿಯಬಹುದಾಗಿದೆ. ಇದರಲ್ಲಿ ಸ್ವಾರಸ್ಯವೇನೆಂದರೆ ಬಲ್ಗೇರಿಯದ ಜನತೆ ರಷ್ಯದ ಪರವಾಗಿ ಇರುವಲ್ಲಿ ಬಲ್ಗೇರಿಯಾ ಸರಕಾರ ಹಿಟ್ಲರಿಗೆ ಸಹಾಯ ಮಾಡಲು ಆತುರಗೊಂಡಿರುವುದೇ.

ರಷ್ಯದ ನೌಕಾ ಬಲವೀಗ ಕಪ್ಪು ಸಮುದ್ರದಲ್ಲಿದೆ. ಇಟೆಲಿ ನೌಕಾಬಲವು ಆ ಸಮುದ್ರಕ್ಕೆ ಪ್ರವೇಶಿಸಿ ಬಲ್ಗೇರಿಯಾ ನೌಕಾಬಲದೊಡನೆ ಸಹಕರಿಸಿದರೆ ರಷ್ಯದ ನೌಕಾಬಲದ ಶ್ರೇಷ್ಠತೆಯನ್ನು ಪ್ರತಿಭಟಿಸಬಹುದು.

ಲೀಬಿಯಾ, ಮಾಲ್ಟಾ ಮತ್ತು ಸುವೇಜ್ ಪ್ರಾಂತಗಳ ಎದ್ಯಮಾನದಿಂದ ಅಲ್ಲಿ ಇಟೆಲಿಯ ಯುದ್ಧ ಹಡಗುಗಳ ಸಂಚಾರಕ್ಕೆ ಬ್ರಿಟಿಷ್ ನೌಕಾಬಲದಿಂದ ತಡೆಯುಂಟಾಗದ ಹಾಗೆ, ಏಕ್ಸಿಸ್ ರಾಷ್ಟ್ರಗಳು ತಮ್ಮ ವಾಯುಬಲವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಹವಣಿಸಿದ್ದಾವೆ. ಇತ್ತಂಡದವರೂ ಮೆಡಿಟರೇನಿಯನಿನ ಜಲಪಾತ್ರವನ್ನು ಯಾರು ಆಳಬೇಕೆಂಬುದನ್ನು ನಿರ್ಧರಿಸಲು ಯುಧಸನ್ನದ್ಧರಾಗುತ್ತಿದ್ದಾರೆ. ಮುಂದಿನ ಇದರ ಪರಿಸ್ಥಿತಿ ನಿರೀಕ್ಷಣೀಯವಾಗಿದೆ.

"ಜರ್ಮನರು ದೀರ್ಘಕಾಲದ ಯುದ್ಧಕ್ಕೆ ಸಿದ್ಧರಾಗಿರಬೇಕು!"

"ಯುದ್ಧ ಬೇಗನೇ ಮುಗಿದೀತೆಂದು ನಿರೀಕ್ಷಿಸಬೇಡಿ" ಎಂದು ಜರ್ಮನಿಯ ಪ್ರಚಾರಕಾರ್ಯಕರ್ತರೀಗ ಜರ್ಮನ್ ಜನತೆಗೆ ಎಚ್ಚರಿಕೆ ಹೇಳತೊಡಗಿದ್ದಾರೆ. ಇದರ ಒಳಗುಟ್ಟೇನೆಂದರೆ, ಜರ್ಮನ್ ಜನರನ್ನು ಇನ್ನೂ ಹೆಚ್ಚಿನ ಆತ್ಮತ್ಯಾಗಕ್ಕೆ ಸಿದ್ಧಗೊಳಿಸುವುದೇ. ಜರ್ಮನ್ ಅಧಿಕಾರಿಗಳ ನಿರೀಕ್ಷೆಯಂತೆ, ರಷ್ಯದ ಯುದ್ಧ ಸದ್ಯದಲ್ಲೇ ಮುಗಿದು, ಜರ್ಮನಿಗೆ ಜಯಶ್ರೀ ಮಾಲೆ ಹಾಕಬೇಕಾಗಿತ್ತು. ವಸ್ತುತಃ ಜರ್ಮನರು ರಷ್ಯದಲ್ಲಿನ ತಮ್ಮ ಶೀಘ್ರ ವಿಜಯದ ಕುರಿತು, ಮೊದ ಮೊದಲು ಬಹಳ ವಿಶ್ವಾಸವುಳ್ಳವರಾಗಿದ್ದು, ರಷ್ಯದ ರಣರಂಗಗಳಲ್ಲಿ ರಷ್ಯದವರ ಇಷ್ಟೊಂದು ತೀವ್ರ ಎದುರಾಟ ನಿರೀಕ್ಷಿಸಿದ್ದಿಲ್ಲ. ಜರ್ಮನರ ಭಾಗಕ್ಕೆ "ತಾನೊಂದನೆಣಿಸಿದರೆ, ದೈವವನ್ನೊಂದ ನೆಣಿಸಿತು" ಎಂಬಂತಾದುದರಿಂದ, ಡಾ। ಗೊಬೆಲ್ಸ್‌ರ ಕಾರ್ಖಾನೆ ಇನ್ನಷ್ಟು ಸುಳ್ಳಿನ ಕಂತೆಗಳನ್ನು ನಿರ್ಮಿಸಿ, ಜರ್ಮನಿಯ ಮುಂದಿರುವ "ಶುಭೋದಯ"ದ ವಿಷಯದಲ್ಲಿ ಅಲ್ಲಿ ವಿಶ್ವಾಸ ಹುಟ್ಟಿಸಿ, ಜರ್ಮನಿಯ ಕಾದಾಟದ ಸ್ಫೂರ್ತಿಯನ್ನು ಕಾಪಾಡಿಕೊಳ್ಳಬೇಕಾಗಿದೆ. ಜರ್ಮನರು,— ಶೀಘ್ರ ವಿಜಯಗಳಿಂದ ಸ್ವರ್ಗ ಪಡೆಯುವೆವೆಂದು ಆಶಿಸಿದ್ದ, ನಂಬಿಕೊಂಡಿದ್ದ ಆ ಜರ್ಮನರು— "ದೀರ್ಘಕಾಲದ ಯುದ್ಧಕ್ಕೇ ಸಿದ್ಧರಾಗುವಂತೆ" ಡಾ। ಗೊಬೆಲ್ಸರ ಪ್ರಚಾರ ಕಾರ್ಯವೀಗ ನಡೆಯಬೇಕಾಗಿದೆ. ನಿರ್ವಾಹವಿಲ್ಲ.

ನೀಲೇಶ್ವರ

ಈ ಪ್ರಾಂತದಲ್ಲಿ ನೆರೆ ಹಾವಳಿಯಿಂದ ಕಷ್ಟಕ್ಕೊಳಗಾದ ಹಲವು ಗ್ರಾಮಸ್ಥರಿಗೆ "ಮಹಾ ಜನ ಫ್ಲಡ್ ಕಮಿಟಿ"ಯ ಕಡೆಯಿಂದ ಇದು ವರೆಗೆ ಸುಮಾರು ರೂಪಾಯಿ ೧೫೦೦ ಬಾಳುವ ಆಹಾರ ಮತ್ತು ಜೀವನೋಪಾಯದ ಸಾಮಗ್ರಿಗಳು ದೊರಕಿರುವುದೆಂದೂ, ಕೆಲಸಕೊಟ್ಟು ಸಹಾಯ ಮಾಡಲು ಗ್ರಾಮಾಯಣ ಕಡೆಯಲ್ಲಿ ಕಾಲುದಾರಿಯ ಕಾಮಗಾರಿಯೊಂದು ಈಚಿಗೆ ಆರಂಭವಾಗಿದೆ ಎಂದೂ ತಿಳಿದುಬಂದಿದೆ.

ಇಂಡಿಯಾದ ಗಡಿಗಳ ರಕ್ಷಣೆ



ಮಾತೃಭೂಮಿಯನ್ನು ರಕ್ಷಿಸಲು ಇಂಡಿಯಾದ ಗಡಿರಕ್ಷಕ ಪಡೆಗಳು ತೀರದಿಂದ ಆಚೆ ಬಹುದೂರದಲ್ಲಿದ್ದಲ್ಲಿವೆ. ರಾಯಲ್ ಇಂಡಿಯನ್ ನೌಕಾ ದಳವು ಇಂಡಿಯಾ ತೀರದಲ್ಲಿಯೂ ಮತ್ತು ಬಾಹ್ಯ ಜಗತ್ತಿನೊಂದಿಗೆ ಸಂಬಂಧವಿಟ್ಟಿರುವ ಆದರ ಸಮುದ್ರ ಮಾರ್ಗಗಳಲ್ಲಿಯೂ ಗಸ್ತು ಹೊಡೆಯುತ್ತದೆ. ವಿಸ್ತೃತವಾದ ಇಂಡಿಯಾ ಪಡೆಯು ನೂತನವಾಗಿ ಸುಸಜ್ಜಿತವಾಗಿರುವ ಅದರ ಯಾಂತ್ರಿಕ ಶಕ್ತಿಯಿಂದ ಫೇಸಿಸ್ಟ್ ದಾಳಿಗಳನ್ನು ಇಂಡಿಯಾದಿಂದ ಆನತಿ ದೂರದಲ್ಲಿರುವ ಗಡಿಗಳಲ್ಲಿಯೇ ತಡೆಗಟ್ಟುತ್ತದೆ. ಇಂಡಿಯಾದಲ್ಲಿರುವ ವೈಮಾನಿಕ ದಳವು ಅಂತರಕ್ಷದಲ್ಲಿಯೇ ಹೊಂಚುಹಾಕಿಕೊಂಡು ಕಾಯುತ್ತಿರುತ್ತದೆ— ಇಂಡಿಯಾಕ್ಕೆ ಬರುವ ದಾಳಿಕಾರನನ್ನು ಸದೆಬಡಿದು ನಾಶಮಾಡಲು ಸಿದ್ಧನಿರುತ್ತೆ. ಈ ರಕ್ಷಣ ದಳಕ್ಕೆ ಹೆಚ್ಚು ಹೆಚ್ಚಾಗಿ ಬೇಕಾದ ಸಲಕರಣೆಗಳು ಇಂಡಿಯಾದಲ್ಲಿಯೇ ತಯಾರಾಗುತ್ತವೆ: ಇದು ಇಂಡಿಯಾವ ಸಾಮಾನುಗಳಿಗೂ, ಕೆಲಸಗಾರರಿಗೂ—ಬಂಡವಾಳಕ್ಕೂ ಕೆಲಸಕೊಡುತ್ತೆ. ಇಂಡಿಯಾದ ರಕ್ಷಣೆಯನ್ನು ಸ್ಥಾಪಿಸಲು ನೆರವಾಗುವ ನಿಮ್ಮ ದೇಶದ ಜನರಿಗೆ ಸಹಾಯ ಮಾಡಲು ನೀವೇನಾದರೂ ಕೊಡುತ್ತಿರುವಿರಾ?

G.I. Kn. 53.

ಕೊಳ್ಳಿರಿ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

ನಾವು ಸಂಚಯ ಮಾಡಿದ ಪ್ರತಿ ಒಂದು ಆಣೆಯೂ, ದಾಳಿಯನ್ನು ತಡೆಗಟ್ಟಲು ಸೈನ್ಯ, ನೌಕೆ, ಮತ್ತು ವಿಮಾನ ಪಡೆಗಳನ್ನು ಬಲಗೊಳಿಸುತ್ತೆ.

ವಿದೇಶ

ಉತ್ತರ ಫ್ರಾನ್ಸಿನಲ್ಲಿ ಬ್ರಿಟಿಷ್ ವಿಮಾನಗಳು

ಈಚಿಗೆ ರಾಯಲ್ ವಿಮಾನಗಳು ಬ್ರೆಸ್ಟಿನ ಮೇಲೆ ತೀವ್ರ ದಾಳಿ ನಡೆಸಿವೆ. ಹಲವು ಡಾಕ್‌ಗಳ ಮೇಲೆ ಬಾಂಬು ಸುರಿಸಿವೆ; ಅಲ್ಲದೆ ಉತ್ತರ ಫ್ರಾನ್ಸಿನಲ್ಲಿ ಶತ್ರುಗಳ ಹಲವು ವಿಮಾನ ನಿಲ್ದಾಣಗಳನ್ನೂ ಆಕ್ರಮಿಸಿವೆ ಎಂದು ವಾರ್ತೆ.

ಇಕ್ವೇಡರಿನ ಬಳಿ ಶತ್ರುಗಳ ಕಾಟ

ಇಕ್ವೇಡರಿನ ಪಶ್ಚಿಮಕ್ಕೆ ಗಲಪೆಗೋಸ್ ದ್ವೀಪದ ಬಳಿ ಎಕ್ಸಿಸಿನವರ ಒಂದು ರೈಡರು ಹಾವಳಿ ಮಾಡುತ್ತಿದೆ. ಪನಾಮಾ ಕಾಲಿನೆಯ ಸಮೀಪವರ್ತಿಯಾಗಿ ಆ ರೈಡರ್ ಕೆಲಸ ನಡೆಸುತ್ತಿದೆ. ನೂಜಿಲ್ಯಾಂಡ್, ಡಚ್-ಇಂಡೀಸುಗಳ ಹಲವು ಹಡಗುಗಳು ಸಮುದ್ರಯಕ್ಕೆ ಸರಿಯಾಗಿ ಮುಟ್ಟಬೇಕಾದಲ್ಲಿಗೆ ಮುಟ್ಟಲ್ಲ, ಅವುಗಳ ಗತಿ ಏನೆಂದು ತಿಳಿದಿಲ್ಲ ಎಂದು ಪ್ರಕಟವಾಗಿದೆ.

ಇತರ ವಾರ್ತೆಗಳು

ಏಷಿಯಾಟಿಕ್ ಟರ್ಕಿಯಲ್ಲಿ ಭೂಕಂಪದಿಂದ ೨೦೦ ಮಂದಿ ಸತ್ತರು; ರಷ್ಯದವರ ಸಹಾಯಕ್ಕಾಗಿ ರಾಯಲ್ ವಿಮಾನ ಬಲದ ಪ್ರಥಮ ತುಕ್ಕಡಿ ರಷ್ಯಕ್ಕೆ ಬಂದಿಳಿದಿದೆ; ಬಲ್ಗೇರಿಯದಲ್ಲಿನ ಜರ್ಮನಿಯ ಚಟುವಟಿಕೆಗಳು ಟರ್ಕಿಯನ್ನು ಭೀತಿಗೊಳಿಸುವುದಾಗಿಲ್ಲ, ಅದು ರಷ್ಯದ ಮೇಲಿನ ಅಸ್ತ್ರವೆಂದು ಟರ್ಕಿಯ ವರ ವಿಶ್ವಾಸ; ಬಲ್ಗೇರಿಯದವರ ರಕ್ಷಣಾಕಾರ್ಯಗಳಿಗೆ ಯುದ್ಧಾಸಕ್ತ ರಾಷ್ಟ್ರಗಳ ಸ್ವರೂಪವನ್ನು ಕೊಡಲಾಗಿದೆ.

ಸರ್ವಿಯದಲ್ಲಿ ಸಿವಿಲ್ ಯುದ್ಧವೇ?

"ಸರ್ವಿಯದಲ್ಲಿನ ಅತ್ಯಾಚಾರಗಳು ಅಲ್ಲಿ ಸಿವಿಲ್ ಯುದ್ಧವೊಂದನ್ನು ಒದಗಿಸುವಂತಿದೆ. ಇದನ್ನು ಜನಗಳು ತಪ್ಪಿಸುವಂತೆ ಯತ್ನಿಸಬೇಕು" ಎಂದು ಮುಂತಾಗಿ ಸರ್ವಿಯದ ಕೃತ್ರಿಮ ಸೃಷ್ಟಿಯ ಮುಂತ್ರಿ ಜನಗಳಿಗೆ ಎಚ್ಚರಿಕೆ ಹೇಳಿದ್ದಾನೆ.

ಜಪಾನಿಯರ ಪೆರೆಚೂಟ್ ಸೈನಿಕರು

ಶಾನ್ಸಿ ಹೂಪೈ ಪ್ರಾಂತಗಳಲ್ಲಿ ಜಪಾನೀಯರು ಮೊದಲು ಬಾರಿಯಾಗಿ "ಪೆರಚೂಟ್ ಸೈನಿಕ"ರನ್ನು ಇಳಿಸಿದರೆಂದೂ ಚೀನೀಯರು ಅವರೆಲ್ಲರನ್ನು ಧ್ವಂಸ ಮಾಡಿದರೆಂದೂ ಹೇಳಲಾಗಿದೆ.

ಠಾಗೂರರ ಭಾವಚಿತ್ರ

ಠಾಗೂರರ ಭಾವಚಿತ್ರವನ್ನು ಲಂಡನಿನ ರಾಷ್ಟ್ರೀಯ ಚಿತ್ರಗಳ ಗ್ಯಾಲರಿಯಲ್ಲಿ ಇರಿಸಲು ಮಿ! ಬೆರ್ನಾರ್ಡ್ ಷಾರವರು ಶಿಫಾರಸು ಮಾಡಿದ್ದು ಆ ಸೂಚನೆ ಈಗ ಮಾನ್ಯವಾಗಿದೆ.

ಗಂಟಲ ಸೋಂಕು ಭಾದಿಸದಂತೆ ಎಚ್ಚರವಾಗಿರಿ

ನಿಮ್ಮ ಗಂಟಲಲ್ಲಿ ಸ್ವಲ್ಪ ತುರಿಕೆ ಇಲ್ಲವೆ ಗಂಟಲು ಕಟ್ಟಿದಂತೆ ಕಂಡು ಕೊಂಡರೆ, ಪೆಪ್ಸ್– ವಿಷಹಾರಕ ಶ್ವಾಸನೀಯ ಬಿಲ್ಲೆಗಳನ್ನು ಸೇವಿಸಿ. ಇದುವೇ ಗಂಟಲ ಸೋಂಕು ಬಾಧಿಸದಂತೆ ಮಾಡುವ ಖಾತರಿ ಚಿಕಿತ್ಸೆ.

ಪೆಪ್ಸ್ ಬಾಯಲ್ಲಿ ಕರಗಿ, ಹಾಗೆ ಅಮೂಲ್ಯ ಔಷಧಿಯ ಸಾರಗಳನ್ನು ಹೊರಸೂಸಿ, ಅವು ನಿಮ್ಮ ಉಸಿರಾಟದಲ್ಲಿ ಬೆರೆತು ಪುಪ್ಪುಗಳೊಳಗೆ ಆಳಕ್ಕೂ ಸೇರುತ್ತವೆ. ಹೀಗೆ ಪೆಪ್ಸ್ ಉರಿ ಬಾವುಗೊಂಡ ಗಂಟಲ ಕೆಳು ಪರೆಯನ್ನು ಗುಣಪಡಿಸಿ, ಉಸಿರು ನಾಳಗಳಿಂದ ವಿಷಾಣುಗಳನ್ನು ದೂರ ಸರಿಸಿ, ಎದೆ, ಶ್ವಾಸಕೋಶಗಳಿಗೆ ಬಾಧೆ ತಗುಲದಂತೆ ರಕ್ಷಿಸುತ್ತದೆ.



ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸ್ ಒಂದು ರೂಪಾಯಿಯಂತೆ ಮಾರುತ್ತಾರೆ.

ಏಜಂಟರು:– ಮೆಸರ್ಸ್ ದಾಧಾ ಎಂಡ್ ಕೊ. ಪಿ. ಟಿ. ಮದ್ರಾಸು.

ಪೆಪ್ಸ್ ಸೇವಿಸಿ

PEPS

ವಿಷಹಾರಕ ಶ್ವಾಸನೀಯ ಬಿಲ್ಲೆಗಳು.

ನಂಬ್ರ 974ನೇ ವಿಟ್ಲ ಸಹಕಾರಿ ಸಂಘ

ದ. ಕ. ಜಿಲ್ಲಾ ಸಹಕಾರ ಸಂಘಗಳ ಡಿಪ್ಯೂಟಿ ರಿಜಿಸ್ಟ್ರಾರವರ R.C. No. 121/41 ತಾ. 31-1-41ನೇ ಹುಕುಂ ಮೇರೇಗೆ ಈ ಕೆಳಗೆ ಹೆಸರು ಕಾಣಿಸಿದ ಜನರಿಗೆ ವ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ:—ಈ ಸಂಘದಲ್ಲಿ ಈ ಕೆಳಗೆ ಹೆಸರು ಕಾಣಿಸಿದ ಜನರ ಪಾಲು ಭಂಡವಾಳ ವ ಖಡ್ಡಾಯ ಠೇವಣಾತಿಗಳು ಅವರ ಅಮಾನತು ಲೆಖ್ಖದಲ್ಲಿ ಬಾಕಿ ಇದ್ದು, ಸದರಿಯವರು ವ ಅವರ ವಾರೀಸುದಾರರು ಈ ವರೇಗೂ ವಾಪಾಸು ಪಡಕೊಳ್ಳದ್ದರಿಂದಲೂ, ಅವರ್ಯ ಗ್ರಾಮದಲ್ಲಿ ವಾಸ್ತವ್ಯವಿಲ್ಲದ್ದರಿಂದ ಈಗ ಎಲ್ಲಿರುತ್ತಾರೆಂದೂ, ಅವರ ವಾರೀಸುದಾರರು ಯಾರೆಂಬ ವಿಷಯವೂ ಗೊತ್ತಿಲ್ಲದಿರುವುದರಿಂದಲೂ, ಅವರು ವ ಅವರ ವಾರೀಸುದಾರರು ಸದರಿ ಐವೇಜನ್ನು ಈ ಆಗಾಯಿತು ಒಂದು ತಿಂಗಳೊಳಗೆ ಸದರಿ ಸಂಘದ ಆಫೀಸಿನಲ್ಲಿ ಬಂದು ಪಡಕೊಳ್ಳುವುದು ತಪ್ಪಿದಲ್ಲಿ ಸದರಿ ಐವೇಜನ್ನು ಸದರಿ ಸಂಘದ ಕ್ಷೇಮನಿಧಿ ಲೆಖ್ಖಕ್ಕೆ ವರ್ಗಾಯಿಸಲಾಗುವುದು.

ಜಂಜ್ರ ನಂಬ್ರ.	ಮೆಂಬರ ನಂಬ್ರ.	ಮೆಂಬರನ ಹೆಸರು.	ಹಿರಿಯರ ಹೆಸರು.	ವಿಳಾಸ.	ಅಮಾನತಿನಲ್ಲಿರುವ ಮೊಬಲಗು.
1	650	ಮಾನಪೂಜಾರಿ	ನರಸಿಂಗ ಪೂಜಾರಿ ಅಳಿಯ	ಕೂಡೂರು ವಿಟ್ಲ ಕಸಬಾ	0—6—0.
2	656	ಬಿ. ಮಂಜುನಾಥ ಶೆಟ್ಟಿ	ಬಿ. ಪುರುಶೋತ್ತಮ ಶೆಟ್ಟಿ ಮಗ	ವಿಟ್ಲ ಕಸಬಾ	0—1—6.
3	431	ವಿಶ್ವನಾಥ ಶ್ಯಾನುಭಾಗ	ಪದ್ಮನಾಭಯ್ಯನವರ ಮಗ	ವಿಟ್ಲ ಕಸಬಾ	6—0—0.
4	598	ಗೌರಿ ಹೆಂಗಸು	ಲಕ್ಷ್ಮಿ ಹೆಂಗಸಿನ ಮಗಳು	ವಿಟ್ಲ ಕಸಬಾ	1—0—0.
5	643	ಸುಬ್ರಾಯ ಭಟ್ಟ	ಸುಂದರ ಭಟ್ಟ	ವಿಟ್ಲ ಕಸಬಾ	1—0—0.
6	521	ವಿಷ್ಣು ಕೆದಿಲಾಯ	ಕೃಷ್ಣ ಕೆದಿಲಾಯ	ವಿಟ್ಲ ಕಸಬಾ	0—6—0.
7	330	ಕಾಸಿಮ್ ಸಾಹೇಬ	ಬುಡಾನ್ ಸಾಹೇಬರ ಮಗ	ವಿಟ್ಲ ಕಸಬಾ ಬೆಳಂತಿಪೊಗ್ರು	1—0—0.
8	523	ಕೊರಗ ಗೌಡ	ಪುಟ್ಟ ಗೌಡನ ಮಗ	ಕೂಡೂರು ವಿಟ್ಲ ಕಸಬಾ	1—0—0.
9	350	ಸುಬ್ರಾಯ ಭಟ್ಟ	ಗಣೇಶ ಭಟ್ಟ ಮಗ	ಆಲಂಗಾರು ವಿಟ್ಲ ಕಸಬಾ	7—0—0.
10	432	ಕೊರಗ ಮೂಲ್ಯ	ಕಿಂಞಣ್ಣ ಮೂಲ್ಯನ ಮಗ	ಸೋಣಂಗೂರು ವಿಟ್ಲ ಕಸಬಾ	2—0—0.
11	512	ಬಾಬು ಪುರುಷ	ಜಾರು ಪುರುಷನ ಮಗ	ಜೋಗಿ ಮಠ ವಿಟ್ಲ ಕಸಬಾ	1—0—0.
12	566	ಸುಬ್ಬ ಮೂಲ್ಯ	ಮಹಾಲಿಂಗ ಮೂಲ್ಯನ ಅಳಿಯ	ವಿಟ್ಲ ಕಸಬಾ	1—0—0.
13	300	ಬುಡಾನ ಸಾಹೇಬ	ಸೈದಿ ಅಬ್ಬಸೆ ಸಾಹೇಬರ ಮಗ	ವಿಟ್ಲ ಕಸಬಾ ದಾಸ್ರಬೆಟ್ಟು	3—0—0.
14	497	ಕೋಟಿ ಮೂಲ್ಯ	ಸೋಮ ಮೂಲ್ಯನ ಅಳಿಯ	ಚಂದಪ್ಪಾಡಿ ವಿಟ್ಲ ಕಸಬಾ	1—0—0.
15	546	ಜಾರು ಪೂಜಾರಿ	ಕೋಟಿ ಪೂಜಾರಿ ಅಳಿಯ	ಜೋಗಿಬೆಟ್ಟು ವಿಟ್ಲ ಕಸಬಾ	1—0—0
16	563	ಬಡ್ಪಕುಂಞ ಬ್ಯಾರಿ	ಮೂಶೆ ಬ್ಯಾರಿ ಮಗ	ನೆಕ್ಕರೆ, ವಿಟ್ಲ ಕಸಬಾ	1—0—0.
17	601	ಪಕ್ಕುದಿ ಬ್ಯಾರಿ	ಮಾಪುದೆ ಬ್ಯಾರಿ ಮಗ	ಶೇರಾಜೆ ವಿಟ್ಲ ಕಸಬಾ	1—0—0.
18	605	ಬಂಟು ಮೂಲ್ಯ	ಕಿಂಞಣ್ಣ ಮೂಲ್ಯನ ಮಗ	ವಿಟ್ಲ ಕಸಬಾ	1—0—0.
19	458	ಅಪ್ಪಯ್ಯ ಮೂಲ್ಯ	ಅಬ್ಬು ಮೂಲ್ಯನ ಅಳಿಯ	ವಿಟ್ಲ ಕಸಬಾ	2—0—0.
20	459	ನರಸಿಂಗ ಪೂಜಾರಿ	ಕೊರಗ ಪೂಜಾರಿ ಅಳಿಯ	ವಿಟ್ಲ ಕಸಬಾ	1—0—0.
21	460	ಅಂಗರ ಪೂಜಾರಿ	ಕುಂಬ ಪೂಜಾರಿ ಮಗ	ದೇವಶ್ಯ ಬೈಲು, ವಿಟ್ಲ ಕಸಬಾ	2—0—0.
22	468	ಸೋಮು ಪೂಜಾರಿ	ನರಸಿಂಗ ಪೂಜಾರಿ ಅಳಿಯ	ವಕ್ಕೆತ್ತೂರು, ವಿಟ್ಲ ಕಸಬಾ	2—0—0.
23	478	ಅಮ್ಮು ಪೂಜಾರಿ	ಕೊರಗ ಪೂಜಾರಿ ಅಳಿಯ	ವಕ್ಕೆತ್ತೂರು, ವಿಟ್ಲ ಕಸಬಾ	1—0—0.
24	480	ಬಾಳಪ್ಪ ಪೂಜಾರಿ	ದುಗ್ಗ ಪೂಜಾರಿ ಅಳಿಯ	ನೆಕ್ಕಾರು, ವಿಟ್ಲ ಕಸಬಾ	1—0—0.
				Total Rs.	38—13—6.

ವಿಟ್ಲ,
ತಾ. 15—9—41.

ಕೆ. ಬಾಲಪ್ಪ ಶೆಟ್ಟಿ,
ಅಧ್ಯಕ್ಷ.
ನಂಬ್ರ 974ನೇ ವಿಟ್ಲ ಸಹಕಾರಿ ಸಂಘ.

ನನ್ನ ಜೀವಮಾನದಲ್ಲಿ ಯಾವಾಗಲೂ
ನಾನು ಯೋಗ್ಯತಾಪತ್ರವನ್ನು
ಬರೆದು ಕೊಟ್ಟವನಲ್ಲ
ಆದರೆ ಇದರಲ್ಲಿ ಬರೆದಿರುವುದು
ನಿಶ್ಚಯವೆಂದು ಯಾವ ಕೋರ್ಟ್
ನಲ್ಲಿ ಬೇಕಾದರೂ ರೂಪಿಸಬಲ್ಲೆನು.
ಬದುಕಿನಲ್ಲಿ ಸ್ವಾರಸ್ಯವುಂಟೆಂದು ಈಗ ನನಗೆ
ತಿಳಿಯುತ್ತದೆ. ಬಳಲಿ ಬೇಸತ್ತವರು
ಇರ್ವಿಂಗ್ಸ್ ಈಸ್ಟ್-ವೈಟ್ ಟೇಬ್ಲಟ್‌ಗಳನ್ನು
ತೆಗೆದುಕೊಳ್ಳಬೇಕು.

IRVING'S
Yeast-Vite
TONIC TABLETS

ಆಯ್ಯಾ, ಇದು ನಾನಾಗಿಯೇ ಸ್ವೇಚ್ಛೆಯಿಂದ ಬರೆದುಕೊಟ್ಟ ಯೋಗ್ಯತಾಪತ್ರ ಮತ್ತು ಇದರಲ್ಲಿ ಬರೆದಿರುವುದು ನಿಶ್ಚಯವೆಂದು ನಾನು ಯಾವ ಕೋರ್ಟ್‌ನಲ್ಲಿ ಬೇಕಾದರೂ ರೂಪಿಸಬಲ್ಲೆನು. ಯಾವಾಗಲೂ ನನಗೆ ಪೇಟೆಂಟ್ ಔಷಧಿಗಳಲ್ಲಿ ಅಷ್ಟೇನೂ ನಂಬಿಕೆಯಿರಲಿಲ್ಲ.

ಈಗ ನನಗೆ ವಯಸ್ಸು ೬೦. ಯಾವಾಗಲೂ ಶ್ರಮ ಸಾಧ್ಯವಾದ ಮತ್ತು ಕಷ್ಟವಾದ ಕೆಲಸವನ್ನು ಮಾಡುತ್ತಿದ್ದೆನು ಮತ್ತು ಆರೋಗ್ಯವಂತನಾಗಿದ್ದೆನು ಆದರೆ ಈಗ ಆರು ವರ್ಷಗಳಿಂದ ಹೊಟ್ಟೆಸಂಭಂದವಾದ ವ್ಯಾಧಿಯಿಂದ ಬಹಳ ಕಷ್ಟಪಟ್ಟೆನು. ಏನೊ ಕೆಟ್ಟ ವ್ಯಾಧಿಯು ಅಂಟಿತೆಂದು ಚಿಂತಿಸಬೇಕಾಯಿತು. ಯಾವ ಔಷಧದಿಂದಲೂ ಗುಣವಾಗದಿರಲು "ಈಸ್ಟ್ ವೈಟ್" ತೆಗೆದುಕೊಳ್ಳಲು ನಿರ್ಧರಿಸಿದೆನು. ಈಗ ನೀವು ಅದರ ವಿಷಯವಾಗಿ ಹೇಳುವುದೆಲ್ಲಾ ನಿಶ್ಚಯವೆಂದು ನಾನು ಹೇಳಬಲ್ಲೆನು. ಬದುಕಿನಲ್ಲಿ ಸ್ವಾರಸ್ಯವುಂಟೆಂದು ಈಗ ನನಗೆ ತಿಳಿಯುತ್ತದೆ.

ಇದನ್ನು ಸ್ವಲ್ಪವೂ ಸಂದೇಹವಿಲ್ಲದೆ ನಾನು ಶಿಫಾರ್ಸು ಮಾಡುವೆನು. ಈಗ ನನಗೆ ಒಳ್ಳೆ ಹಸಿವೆಯಾಗುತ್ತದೆ. ಮೊದಲಿನ ಹಾಗೆ ಯಾವಾಗಲೂ ಬಳಲಿ ಬೆಂಡಾಗಿರದೆ ಈಗ ಯಾವಾಗಲೂ ಚಟುವಟಿಕೆಯಾಗಿರುತ್ತದೆ. ಏನನ್ನು ತಿಂದರೂ ಜೀರ್ಣಿಸಿಕೊಳ್ಳಬಲ್ಲೆನು. ನಿಶ್ಚಯವಾಗಿಯೂ ಅವು ದೇಹಕ್ಕೆ ಒಳ್ಳೆಯದನ್ನು ಮಾಡುತ್ತವೆ. ಯಾರಾದರೂ ಸರಿಯೆ ಬಳಲಿ ಬೆಂಡಾಗಿದ್ದರೆ ಈಸ್ಟ್-ವೈಟ್ ತೆಗೆದುಕೊಂಡು ಆದರಿಂದೇನು ಗುಣವಾಗುತ್ತದೆಯೆನ್ನುವುದನ್ನು ನೋಡಬೇಕು.

ನನ್ನ ಜೀವಮಾನದಲ್ಲಿ ಯಾವಾಗಲೂ ನಾನು ಯೋಗ್ಯತಾಪತ್ರವನ್ನು ಬರೆದವನಲ್ಲ. ಆದರೆ ಈಸ್ಟ್-ವೈಟ್‌ನಿಂದ ನನಗೆ ಎಷ್ಟು ಒಳ್ಳೆಯದಾಯತೆನ್ನುವುದನ್ನು ನಿಮಗೆ ತಿಳಿಸುವುದು ನನ್ನ ಕರ್ತವ್ಯವಾಗಿದೆ. ಬೇರೆ ಯಾರಾದರೂ ಇದನ್ನು ಓದಿ, ಓದುವರಿಂದ ಅವರಿಗೆ ಲಾಭವೂ ಉಂಟಾಗಬಹುದು. ಬಳಲಿ ಬೇಸತ್ತವರು "ಈಸ್ಟ್-ವೈಟ್" ತೆಗೆದುಕೊಳ್ಳಬೇಕು. ಆದರಿಂದ ಒಳ್ಳೆ ಫಲಗಳು ಕಂಡುಬರುವುದೆನ್ನುವುದರಲ್ಲಿ ಸಂದೇಹವಿಲ್ಲ. ಈ ನಿಜಸಂಗತಿಗಳನ್ನು ನೀವು ಪ್ರಕಟಿಸುವುದರಲ್ಲಿ ನನ್ನ ಆಕ್ಷೇಪಣೆಯಿಲ್ಲ. ಇತಿ, ಜಿ. ಡಿ.

ಇದರ ರಹಸ್ಯ

ಯೀಸ್ಟ್-ವೈಟ್‌ನ ಅಪಾರ ಶಕ್ತಿಯ ರಹಸ್ಯವೇನೆಂದರೆ ಅದು ವೈಟಾಮಿನ್ 'ಬಿ' ತುಂಬಿರುವ ಸ್ವಚ್ಛವಾದ ಔಷಧಯುಕ್ತ ಯೀಸ್ಟ್ ಮತ್ತು ಇತರ ಅಮೂಲ್ಯ ಶಕ್ತಿವರ್ಧಕ ಔಷಧಗಳು ಪ್ರಾಮುಖ್ಯವೈದ್ಯರು ಹೇಳಿದಂತೆ ಶಾಸ್ತ್ರೀಯತೆಯಲ್ಲಿ ಬಹಳ ಜಾಗರೂಕತೆಯಿಂದ ಬೆರಸಲ್ಪಟ್ಟು ತಯಾರಾಗಿದೆ. ಯೀಸ್ಟ್-ವೈಟ್ ಅತಿ ತೀವ್ರವಾಗಿ ಫಲಿಸುವ ಶಕ್ತಿವರ್ಧಕ ಔಷಧ.

ಗುಣವಿಲ್ಲವೋ-ದುಡ್ಡು ಬೇಡ

ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ನಮ್ಮ "ಗುಣವಿಲ್ಲವೋ-ದುಡ್ಡು ಬೇಡ"ಯೆನ್ನುವ ಯೋಜನೆಯನ್ನು ಯಾವಾಗಲಾದರೂ ಪರೀಕ್ಷಿಸಿದ್ದೀರಾ? ನೀವು ಬಳಲಿ ಬೆಂಡಾಗಿದ್ದರೂ, ತಲೆನೋವಿನಿಂದ ನರಳುತ್ತಿದ್ದರೂ, ವಾತಗ್ರಸ್ತರಾಗಿದ್ದರೂ, ಅಥವಾ ಯಾವ ಕಾರಣದಿಂದಲಾದರೂ ಸರಿಯೇ ಉತ್ಸಾಹರಹಿತರಾಗಿದ್ದರೂ, ಔಷಧ ವ್ಯಾಪಾರಿಯಿಂದಲೋ ಆಥವಾ ಸ್ಟೋರಿನಿಂದಲೋ ಒಂದು ಶೀಸೆ ಇರ್ವಿಂಗ್ಸ್ ಯೀಸ್ಟ್-ವೈಟ್ ಟೇಬ್ಲಟ್‌ಗಳನ್ನು ತರಿಸಿಟ್ಟುಕೊಳ್ಳಿ. ನಿಷ್ಕೃಷ್ಟರೀತಿಯಲ್ಲಿ ಸೇವಿಸಿರಿ. ನೀವು ಪೂರ್ಣ ತೃಪ್ತಿ ಹೊಂದದಿದ್ದರೆ ಖಾಲೀ ಪ್ಯಾಕೀಟನ್ನು "ಗ್ಯಾರೆಂಟಿ ಸೀಲ್"ನೊಡನೆ ನಮಗೆ ಕಳುಹಿಸಿ. ನಿಮ್ಮ ಹಣವು ನಿಮಗೆ ಪೂರಾ ವಾಪಾಸುಮಾಡಲ್ಪಡುವುದು. ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ಮತ್ತು ಸ್ಟೋರ್‌ಗಳಲ್ಲಿಯೂ ಇರ್ವಿಂಗ್ಸ್ ಯೀಸ್ಟ್-ವೈಟ್ ಟೇಬ್ಲಟ್‌ಗಳು ದೊರೆಯುವುವು.

ಸೋಲ್ ಮ್ಯಾನುಫಾಕ್ಚರರ್ಸ್:
ಇರ್ವಿಂಗ್ಸ್ ಯೀಸ್ಟ್-ವೈಟ್ ಲಿಮಿಟೆಡ್,
ವಾಟ್‌ಫರ್ಡ್, ಇಂಗ್ಲೆಂಡ್.

To serve you —
— Is our Ambition.

Resources of over A Crore and over Forty Lacs of Surplus Funds—these are the means by which we can serve you. The men in our thirty-eight offices, from the senior-most Director to the junior-most employee, are all eager to serve you. Come in to-day and tell us how we can serve you. Or, if you so prefer, we will call upon you at your request.

CANARA BANK, LIMITED.
ESTD: 1906.

XXIII] ಮಂಗಳೂರು, ತಾರೀಕು ೧೯-೯-೧೯೪೫ [೫೦
೧೮೬೩ ವೃಷ ಸಂವತ್ಸರದ ಭಾದ್ರಪದ ಬ ೧೩ ಶುಕ್ರವಾರ

ಅಮೆರಿಕದ ಕಾರ್ಯನೀತಿಯಲ್ಲಿ ಪೆಸಿಫಿಕ್ಕಿನ ಸ್ಥಾನವೆಲ್ಲಿ?

ಅಟ್ಲಾಂಟಿಕ್ ಸಾಗರದಲ್ಲಿ ಏಕ್ಸಿಸ್‌ನವರ ಸಬ್‌ಮೆರೈನ್ ಇತ್ಯಾದಿಗಳನ್ನು ಧ್ವಂಸ ಮಾಡಲೇ ಬೇಕೆಂದು ನಿರ್ಧರಿಸಿರುವ ಅಮೆರಿಕದ ಈ ಭೀಷ್ಮ ಪ್ರತಿಜ್ಞೆಯು ದೂರದ ಪೂರ್ವದ ಪರಿಸ್ಥಿತಿಯನ್ನು ಕೆಲವು ಮಟ್ಟಿಗೆ ಬದಲಾಯಿಸಬಹುದಾಗಿದೆ. ಈ ಸಾಗರದಲ್ಲಿ ಆದಿಯಲ್ಲಿ ಬ್ರಿಟಿಷರೊಬ್ಬರೇ ರಕ್ಷಣೆಯ ಕಾರ್ಯವನ್ನು ನಡೆಸುತ್ತಿದ್ದುದು ನಿಜವಾದರೂ, ಅನಂತರ ಜರ್ಮನಿಯ "ಯು" ಬೋಟುಗಳ ಹಾವಳಿ ಎಪರೀತವಾಗಿ, ಬ್ರಿಟನ್ ಒಂದೇ ಆ ರಕ್ಷಣಾಕಾರ್ಯವನ್ನು ಪೂರೈಸುವುದು ಕಷ್ಟವಾಗಿ, ಅಮೆರಿಕವೂ ಅಲ್ಲಿ ತಲೆ ಹಾಕಬೇಕಾಗಿ ಬಂದಿತು. ಹಾಗೆ ಅಮೆರಿಕವು ಪ್ರಥಮತಃ ಗ್ರೀನ್‌ಲ್ಯಾಂಡ್, ಐಸ್‌ಲ್ಯಾಂಡುಗಳನ್ನು ಪ್ರವೇಶಿಸಿತು; ಪ್ರಕೃತ ಅಟ್ಲಾಂಟಿಕಿನಲ್ಲಿ ಬ್ರಿಟಿಷ್ ನೌಕೆಗೂ ಬೆಂಬಲವೀಯುವ, ಅಲ್ಲಿ ಕಾಣಸಿಕ್ಕುವ ಏಕ್ಸಿಸಿನ ಹಡಗು ಇತ್ಯಾದಿಗಳ ಮೇಲೆಲ್ಲ ಗುಂಡು ಹಾರಿಸುವ ಈ ಕಾರ್ಯಕ್ರಮಕ್ಕೂ ಕೈಹಾಕುವ ನಿರ್ಧಾರ ಮಾಡಿತು.

ಈ ಸಂದರ್ಭದಲ್ಲಿ, ಅಟ್ಲಾಂಟಿಕಿನ ರಕ್ಷಣಾಭಾರವನ್ನು ಹೊತ್ತಿರುವ ಅಮೆರಿಕ, ಪೆಸಿಫಿಕ್ಕಿನಲ್ಲಿ ತನ್ನ ಜವಾಬುದಾರಿಯನ್ನು ಕಡಿಮೆಮಾಡಿಕೊಳ್ಳುವುದೇ? ಜಪಾನರನ್ನು ಸಮಜಾಯಿಸುವುದೇ? ಅಮೆರಿಕ ಜಪಾನುಗಳೊಳಗೆ ಈಗ ಮಾತುಕಥೆಗಳು ಸಾಗುತ್ತಿರುವುದಾದರೂ, ಅದರ ಸರಿಯಾದ ವರದಿ ಇನ್ನೂ ಬಂದಿಲ್ಲವಾಗಿ, ಅಮೆರಿಕದ "ಮರ್ಜಿ" ಪೆಸಿಫಿಕ್ಕಿನಲ್ಲಿ ಹೇಗೆಂದು ಕಂಠೋಕ್ತವಾಗಿ ಹೇಳಬರುವುದಿಲ್ಲ.

ಈಚಿಗಿನ ಕೆಲ ಪ್ರಮುಖ ರಾಜನೀತಿಜ್ಞರ ಹೇಳಿಕೆಯೆನ್ನು ನೋಡಿದರೆ, ಅಮೆರಿಕ ಚೀನಕ್ಕೆ ಮಾಡಲಿರುವ ಸಹಾಯವಾಗಲೀ, ಜಪಾನಿನ ಮೇಲೆ ಹೊರಿಸಿರುವ ನಿರ್ಬಂಧಾಜ್ಞೆಯ ಬಿಗಿಯಾಗಲಿ ತಪ್ಪದೆಂದು ಊಹಿಸಬಹುದಾಗಿದೆ. ಆದರೂ ಇದಕ್ಕೆ ವ್ಯತಿರಿಕ್ತವಾಗಿ ಕೆಲಸಮಾಡತಕ್ಕ ಪಂಗಡವೂ ಅಮೆರಿಕದಲ್ಲಿ ಇಲ್ಲದೆ ಇಲ್ಲ. ಅಮೆರಿಕದ "ಸ್ಟೇಟ್ ಡಿಪಾರ್ಟ್‌ಮೆಂಟಿನ" ಒಂದು ಬಲವಾದ ತಂಡವು, ತನ್ನ ಕಾರ್ಯಭಾರಗಳನ್ನು ಅಂದಿನಿಂದಲೂ ಜೋರಾಗಿ ನಡೆಸುತ್ತಲೇ ಇದೆ. ಬ್ರಿಟನಿನಲ್ಲಿ "ಕ್ಲೈವ್‌ಡೆನ್" ಗುಂಪಿನವರು ಇದ್ದಂತೆ, ಇಲ್ಲಿ ಈ ಪುಣ್ಯಾತ್ಮರು; ಅವರ "ಎಂಡ್ ಕೊ!" ಇವರ ಮುಖ್ಯೋದ್ದೇಶವು "ಜಗಳಗಂಟರಿಗೆ" ಲಂಚದ ಮುಜರಿಯನ್ನಾದರೂ ಮಾಡಿ, ಅವರನ್ನು ಬಗಲಿಗೆ ಹಾಕುವುದು. ಅತ್ತ ಚೀನಕ್ಕೆ ಅಮೆರಿಕದ ಸಹಾಯ ಕೊಟ್ಟು, ಆಗಲೇ ಜಪಾನಿಗೆ ಅಮೆರಿಕದ ಎಣ್ಣೆಯನ್ನೂ, ಯುದ್ಧಸಾಮಗ್ರಿಗಳನ್ನೂ ಸರಬರಾಯಿಮಾಡಲು ಸ್ವೀಕೇಪಕರಾದವರಿವರೇ. ಈ ಕಾರಣದಿಂದ, ಈ ಸಮಯದಲ್ಲಿ, ಈ "ಎಂಡ್ ಕೊ" ಪುಣ್ಯಾತ್ಮರು ಮೇಲಕ್ಕೆದ್ದು, ಯಾವ ಕಿತಾಪತಿ ಮಾಡುವರೋ ಅದೀಗ ಹೇಳಲಾಗದು. ಒಂದು ವೇಳೆ ಅವರದೇನೇ ಇದ್ದರೂ, ಈಗ ಅದು ವ್ಯರ್ಥವೆಂದೇ ಅದನಲ್ಲಿಗೇ ಬಿಡುವ.

ಹೇಗೂ ವಿಚಾರಣೀಯವಾದ ಒಂದು ಸಂಗತಿ ಇಲ್ಲಿದೆ. ಜಪಾನಿನವರಿಗೆ ಎಣ್ಣೆ ಬೇಕು. ತಲೆಯ ಮೇಲೆ ತಲೆ ಬಿದ್ದರೂ, ಅವರು ಅದನ್ನು ಪಡೆಯಲೇ ಬೇಕೆಂದು ನಿರ್ಧರಿಸಿದ್ದಾರೆ. ಅಮೆರಿಕದೊಡನೆಯೂ ಅದೇ ಮಾತನ್ನು ಅವರು ತಿಳಿಸಿರಬೇಕು. ಅದಕ್ಕೆ ಅಮೆರಿಕದ ಉತ್ತರವೇನೆಂಬುದನ್ನು ನೋಡಿಕೊಳ್ಳದೆ, ಪೆಸಿಫಿಕ್ಕಿನ ಭವಿಷ್ಯವನ್ನು ನಿರ್ಧರಿಸುವುದು ಸಾಧ್ಯವಲ್ಲ!

"ಗೇಣಿ ಅಥವಾ ಕಡ"ದ ಮಸೂದೆಯ ಸಾಮಗ್ರಿಗಳಿಗೆ ರಕ್ಷಣೆ

ಅಮೆರಿಕಾ ಖಂಡ ಮತ್ತು ಐಸ್‌ಲ್ಯಾಂಡ್ ಜಲಧಿಯ ಮಧ್ಯೇ ಓಡಾಡುತಿರುವ "ಗೇಣಿ ಅಥವಾ-ಕಡ"ದ ಮಸೂದೆಗೆ ಸಂಬಂಧಪಟ್ಟ ಸಾಮಗ್ರಿಗಳುಳ್ಳ ಯಾವತ್ತು ಹಡಗುಗಳನ್ನೂ ಅಮೆರಿಕದ ನೌಕೆಯು ಕಾಪಾಡುವುದು-ಹೀಗೆಂದು ಅಮೆರಿಕದ ನೌಕಾ ಸೆಕ್ರಟರಿಗಳು ನುಡಿದರಲ್ಲದೆ, ಆ ಕ್ಷೇತ್ರದಲ್ಲಿ ಕಂಡುಬರುವ ಏಕ್ಸಿಸಿನ ಛಾಯೆಯುಳ್ಳ ಪ್ರತಿಯೊಂದು ಹಡಗು, ಸಬ್‌ಮೆರೈನ್ ಇತ್ಯಾದಿಗಳನ್ನು ಕೈಸೆರೆ ಹಿಡಿಯಲು ಅಥವಾ ನಾಶ ಮಾಡಲು ಅಮೆರಿಕದ ನೌಕೆಗೆ ಅಪ್ಪಣೆ ಮಾಡಿದೆ ಎಂದೂ ಪ್ರಕಟಿಸಿದ್ದಾರೆ.

ಲೀಬಿಯನ್ ಗಡಿಗಳಲ್ಲಿ

ತಬ್ರೂಕಿನಲ್ಲಿ ಈಚೆಗೆ ಹೆಚ್ಚಿನ ಚಟುವಟಿಕೆಗಳು ಕಂಡುಬರುತ್ತಿವೆ. ಲೀಬಿಯದ ಗಡಿಗಳಲ್ಲಿ ಸಣ್ಣ ಪುಟ್ಟ ಕಾದಾಟಗಳು ನಡೆದಿವೆ; ವಿಮಾನ ಯುದ್ಧಗಳೂ ಅಲ್ಲಲ್ಲಿ ಜರುಗಿವೆ. ಶತ್ರುಗಳ ಕೆಲವೊಂದು ಸೇನೆಗಳು ಹಿಮ್ಮೆಟ್ಟಿವೆ.

ರಷ್ಯಾ—ಫಿನ್‌ಲ್ಯಾಂಡಿನೊಳಗೆ ತಾತ್ಕಾಲಿಕ ಸಂಧಿಯೆ?

ರಷ್ಯಾ—ಫಿನ್‌ಲ್ಯಾಂಡುಗಳೊಳಗೊಂದು ತಾತ್ಕಾಲಿಕ ಸಂಧಿಯಾಗುವಂತೆ ಅಮೆರಿಕವು ಪ್ರಯತ್ನಿಸುತ್ತಿದೆಯಾಗಿ ವದಂತಿ.

ಅಮೆರಿಕದ ಕೆಲಸಗಾರರ ಮುಷ್ಕರ

ಸುಮಾರು ೬೭ ಸಾವಿರ ಮಂದಿ ಕಲ್ಲಿದ್ದಲ ಗಣಿಗಳ ಕೆಲಸಗಾರರು ಮುಷ್ಕರ ಹೂಡಿದ್ದಾರೆಂದು ಪಿಟ್ಸ್‌ಬರ್ಗಿನ ವಾರ್ತೆ.

'ಜಪಾನು ಮುಂದುವರಿಸಲಾರದು'

ತಾನೊಂದೇ ಏಕ್ಸಿಸ್ ರಾಷ್ಟ್ರವಾಗಿ, ಜಪಾನು ಪೆಸಿಫಿಕ್ಕಿನಲ್ಲಿ ಮಿತ್ರರಾಷ್ಟ್ರಗಳ ಮೇಲೆ ಬೀಳಲಾರದು; ಅಂಥ ಕಾರ್ಯದಿಂದ, ದೃಢಸಂಕಲ್ಪ ಬದ್ಧವಾಗಿರುವ ಆ ಮಿತ್ರರಾಷ್ಟ್ರಗಳ ಕ್ರೋಧವನ್ನು ಸಂಪಾದಿಸಲು ಜಪಾನು ಇಷ್ಟಪಡಲಾರದು—ಹೀಗೆಂದು ಬ್ರಿಟಿಷ್ ಮಂತ್ರಿಮಂಡಲದ ಮಂತ್ರಿಗಳಾದ ಮಿ। ಡಫ್‌ಕೂಪರರು ಅಭಿಪ್ರಾಯಪಟ್ಟಿದ್ದಾರೆ.

ಇರಾನಿನ ಷಹಾರವರು ಸಿಂಹಾಸನ ತ್ಯಾಗ ಮಾಡಿದರು

ಇರಾನಿನ ಷಹಾರವರು ಸಿಂಹಾಸನ ತ್ಯಾಗ ಮಾಡಿದ್ದಾರೆ; ಅವರ ಹಿರೇ ಮಗ, ಯುವರಾಜರು ಅಲ್ಲಿನ ಷಹಾ ಆಗಲಿದ್ದಾರೆ. ಈ ತ್ಯಾಗದ ವೃತ್ತಾಂತವನ್ನು ಪ್ರಧಾನಮಂತ್ರಿಯು ಪ್ರಕಟಿಸಿದರು. "ಇಷ್ಟರಲ್ಲೇ ಷಾಜಿ ಷಹಾರವರು ಕಾರಿನಲ್ಲಿ ಹೊರಟುಹೋಗಿರುವರು" ಎಂದೂ ಅವರು ಆಗಲೇ ತಿಳಿಸಿದರು.

ಹಿಂದೂದೇಶ

ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಪ್ರಶಂಸೆಯ ಕಾಣಿಕೆ

ಸರ್. ಎಂ. ವಿಶ್ವೇಶ್ವರಯ್ಯನವರ–ಕರ್ಣಾಟಕದ ದಿವ್ಯ ಜ್ಯೋತಿಯಾದವರ ಎಂಭತ್ತೊಂದನೆಯ ವರ್ಷ ವರ್ಧಂತಿಯ ಆಚರಣೆಯಂದು ಸೇರಿದ ಸಾರ್ವಜನಿಕ ಸಭೆಗಳಲ್ಲಿ ಮದ್ರಾಸಿನಲ್ಲಿ ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರರೂ, ಬೊಂಬಾಯಿಯಲ್ಲಿ ಅಲ್ಲಿನ ಮೇಯರರೂ ಸರ್ ವಿಶ್ವೇಶ್ವರಯ್ಯನವರ ಇಂಜಿನಿಯರಿಂಗ್ ಕಾರ್ಯಚಾತುರ್ಯಾದಿಗಳ ಕುರಿತು ಪ್ರಶಂಸೆ ಸಲ್ಲಿಸಿದರು

ಶ್ರೀ। ಭಲ್ಲೂಭಾಯ್ ದೇಸಾಯಿಯವರ ಬಿಡುಗಡೆ

ಅನಾರೋಗ್ಯದ ಕಾರಣದಿಂದ ಶ್ರೀ। ಭ. ದೇಸಾಯಿಯವರನ್ನು ಬಿಡುಗಡೆ ಮಾಡುವಂತೆ ಬೊಂಬಯಿ ಸರಕಾರವು ಅಪ್ಪಣೆ ಮಾಡಿದೆ.

ಸೋಲ್ಜರರಿಗೆ ಜಮಖಾನಗಳ ಮಾರಾಟ

ಸಿಂಧಿನ ಸಮಗ್ರ ಭಾರತ ನೇಕಾರ ಸಂಘದ ಶಾಖೆಗಳು, ಸರಕಾರದೊಡನೆ ವ್ಯಾಪಾರ ನಡೆಸಿ, ಸೈನಿಕರಿಗೆ ಜಮಖಾನಗಳನ್ನು ಒದಗಿಸಿರುವುದು ಕಾಂಗ್ರೆಸ್ ನೀತಿಗೆ ಸರಿಯೇ ಎಂಬ ಕುರಿತು ಪ್ರಶ್ನೆ ಎದ್ದಾಗ, ಗಾಂಧಿಜಿಯವರು ಅದು ಕಾಂಗ್ರೆಸ್ ನೀತಿಗೆ ವಿರೋಧವಲ್ಲ ಎಂದು ತಿಳಿಸಿದ್ದಾರೆ.

ಶ್ರೀ। ಸಿ. ರಾಜಗೋಪಾಲಾಚಾರಿಯವರ ಭಾವಚಿತ್ರ ಅನಾವರಣ

ಮದ್ರಾಸಿನ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ವಠಾರದಲ್ಲಿ ಶ್ರೀ। ಸಿ. ಆರ್. ಆಚಾರಿಯವರ ಭಾವಚಿತ್ರ ಅನಾವರಣ ಮಹೋತ್ಸವವನ್ನು ತಿರುವಾಂಕೂರಿನ ದಿವಾನ್ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರು ನೆರವೇರಿಸುತ್ತ "ಆಚಾರಿಯವರಂಥ ಮಂದಿ ವಿರಳ; ಜಗತ್ತಿಗೆ ಅವರು ಉಪ್ಪಿನಂತೆ" ಎಂದು ಆಚಾರಿಯವರ ಅಮೋಘವಾದ ಗುಣಗಳ ಕುರಿತು ಪ್ರಶಂಸೆ ಸಲ್ಲಿಸಿದರು.

ಆಚಾರ್ಯ ಕೃಪಲಾನಿಯವರು

ಕರ್ಣಾಟಕ ಪ್ರಾಂತಿಕ ಕಾಂ. ಕ. ಅಧ್ಯಕ್ಷರ ಅರಿಕೆಯ ಮೇರೆಗೆ, ಆಚಾರ್ಯ ಕೃಪಲಾನಿಯವರು, ಇದೇ ತಾ. ೨೨ ರಿಂದ ೫ ದಿನಗಳ ವರೆಗೆ ಕರ್ಣಾಟಕದಲ್ಲಿ ಸಂಚರಿಸಲು ಒಪ್ಪಿರುವರೆಂದು ತಿಳಿದು ಬಂದಿದೆ.

ಗಾಂಧಿ ಜಯಂತಿಯ ಕಾಣಿಕೆ

ರಾಷ್ಟ್ರೀಯ ಪುನರ್ ನಿರ್ಮಾಣದ ಸಮಿತಿಯ ಮಹಾರಾಷ್ಟ್ರದ ಪ್ರಾಂತಿಕ ಶಾಖೆಯವರು ಗಾಂಧಿ ಜಯಂತಿಯ ಕಾಣಿಕೆಯಾಗಿ ೨ ಸಾವಿರ ರೂಪಾಯಿಗಳನ್ನೂ ಅರ್ಧ ಕೋಟಿ ಗಜ ಖಾದಿಯನ್ನೂ ಪೂನಾ ಜಿಲ್ಲೆಯಿಂದ ಸಂಗ್ರಹಿಸಲು ನಿರ್ಧರಿಸಿದ್ದಾರೆ.

ವೈಸರಾಯರ ಯುದ್ಧ ನಿಧಿ

ಈ ನಿಧಿಗೆ ಇದುವರೆಗೆ ಸಂಗ್ರಹವಾದ ಮೊತ್ತ ರೂ. ೪,೮೯,೯೦,೦೦೦ ಎಂದು ಪ್ರಕಟವಾಗಿದೆ.

ಕೊನೆಯಬ್ಬೊತ್ತು

ರಷ್ಯದವರಿಗೆ ಫಿನ್‌ಲ್ಯಾಂಡ್ ಕೊಲ್ಲಿಯಲ್ಲಿ ವಿಜಯ; ಜರ್ಮನರು ಉಕ್ರೈನಿನಲ್ಲಿಯೂ ಲೆನಿನ್‌ಗ್ರಾಡಿನ ಕಡೆಯೂ ಮುನ್ನುಗ್ಗುತ್ತಿದ್ದಾರೆ; ಬಂಗಾಳ ಎಸೆಂಬ್ಲಿಯಲ್ಲಿ ಮಂತ್ರಿ ಶುನವಾರ್ಡಿಯವರ ಮೇಲೆ ಅವಿಶ್ವಾಸದ ಠರಾವು ಬಂದಾಗ ಸ್ಪೀಕರರಿಗೆ ಕಾಹಿಲೆ ಎಂದು ವಿಟಿಂಗ್ ಮುಂದೆ ಹಾರಿತು.

ವಿಶ್ವಭಾರತದಲ್ಲಿ ಎಲ್ಲರೂ ಶುಭ್ರ ಜಲಸ್ನಾನವನ್ನೂ ಉಲ್ಲಾಸಯುಕ್ತವಾದ ಹಮಾಮ್ ಸಾಬೂನನ್ನೂ ಪ್ರೀತಿಸುತ್ತಾರೆ.

A TATA PRODUCT

ಸರ್ವ ವಿಧದಲ್ಲೂ ಸ್ವದೇಶಿ ವಸ್ತು

ಪ್ರಾಣಿಗಳ ಕೊಬ್ಬು ಸೇರಿಲ್ಲ

HAMĀM

ಹಮಾಮು

ಈ ದೊಡ್ಡ ಸಾಬೂನು ನಿಮ್ಮ ಸ್ನಾನಕ್ಕೆ

ಟಾಮ್ಕೊ ಸೇಲ್ಸ್ ಡಿಪಾರ್ಟ್‌ಮೆಂಟ್,
2ಎ, ಸೌತ್ ಪೆರೇಡ್,
ಬೆಂಗಳೂರು.

ಚರ್ಮ ಮತ್ತದರ ಹೊಟ್ಟಿನ ಬಾಧಕಗಳಿಗೆ ಸಾಂಬಕನ್ನು ನಂಬಿಕೊಳ್ಳಿ

ಶ್ರೇಷ್ಠ ವಿಷಹಾರಕ ಮುಲಾಂ

ತಲೆ ತೊಗಲ ತುರಿಕೆ, ಹುಳಕಡ್ಡಿ, ಹೆಡಸು, ಮತ್ತಿನ್ನಿತರ ಚರ್ಮಬಾಧಕಗಳಲ್ಲಿ ಸಾಂಬಕ್ ರೋಗಗಳನ್ನು ಪರಿಹರಿಸಿ, ಕೂದಲನ್ನೂ ತಲೆ ತೊಗಲನ್ನೂ ಬಲವರ್ಧಿಸಿ ಆರೋಗ್ಯವಾಗಿಡುವ ಒಂದು ಖಾತರಿ ಚಿಕಿತ್ಸೆ. ಸಾಂಬಕ್ ನಲ್ಲಿರುವ ಉತ್ತಮ ವನಸ್ಪತಿ ತೈಲಗಳು ಚರ್ಮದೊಳಕ್ಕೆ ಸುಲಭವಾಗಿ ಹೀರಿಕೊಳ್ಳಲ್ಪಡುವುದರಿಂದ, ನೋವು ಉಪಶಮನಗೊಂಡು, ಉರಿಬಾವು ತಗ್ಗಿ ಸೋರುವುದು ಅರುತ್ತದೆ. ಸಾಂಬಕ್ ಒಂದೂ ಕಲೆಯುಳಿಯದಂತೆ ಗುಣಪಡಿಸುತ್ತದೆ.

ಸಾಂಬಕ್ ಒಂದು ರೂಪ್ಯಾ ಅಥವಾ ರೂ. 2–4–0; ಸಾಬೂನ್ ರೂಪ್ಯಾ ಒಂದು. ಪೌಡರು ಒಂದು ರೂಪ್ಯಾ.

ಏಜೆಂಟರು:— ಮೆಸರ್ಸ್ ದಾಫಾ & ಕೊ., ಪಿ. ಟಿ. ಮದ್ರಾಸು.

ಯಾವಾಗಲೂ ಸಾಂಬಕ್ ಉಪಯೋಗಿಸಿ

ZAM-BUK

ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾಗಿದೆ

ಉಡುಪಿ

ಶ್ರೀಕೃಷ್ಣ ಜನ್ಮಾಷ್ಟಮಿ

ಭಗವಾನ್ ಶ್ರೀಕೃಷ್ಣ ಸನ್ನಿಧಿಯಲ್ಲಿ ಇದೇ ತಾ. ೧೩ನೇ ದಿನ ಶ್ರೀಕೃಷ್ಣ ಜನ್ಮಾಷ್ಟಮಿಯು ಪರ್ಯಾಯ ಶ್ರೀ। ವಿಬುಧಮಾನ್ಯತೀರ್ಥ ಶ್ರೀ।ಪಾದಂಗಳವರ ಕೂಡುವಿಕೆಯಲ್ಲಿ ಎತರಣೆಯಿಂದ ಜರಗಿತು. ಅಂದಿನ ರಾತ್ರಿ ಚಂದ್ರೋದಯಕ್ಕೆ ಶ್ರೀಕೃಷ್ಣನಿಗೆ ಪ್ರಸನ್ನಾರ್ಘ್ಯದ ವ್ಯವಸ್ಥೆಯು ಮಾಡಲ್ಪಟ್ಟಿದ್ದಿತು. ಮರುದಿನ ತಾ. ೧೪ ಅಪರಾಹ್ನ ವಿಟ್ಲಪಿಂಡಿ ಮಹೋತ್ಸವವು ನೆರವೇರಿತು. ರಥೋತ್ಸವವು ವಾದ್ಯ ಘೋಷ ಬಿರುದು ಬಾವಲಿಗಳೊಡನೆ ತೇರುಬೀದಿಯಲ್ಲಿ ಕಿಕ್ಕಿರಿದು ನೆರೆದ ಪ್ರೇಕ್ಷಕರ ಸಂದಣಿಯಲ್ಲಿ ವಿವಿಧ ವೇಷಧಾರಿಗಳ ಮನೋರಂಜಕ ಅಭಿನಯದೊಡನೆ ನಡೆಯಿತು. ನೂರಾರು ವೇಷಧಾರಿಗಳು ಅಭಿನಯ ಪ್ರದರ್ಶನಕ್ಕಾಗಿ ಏರ್ಪಡಿಸಿದ ಅಟ್ಟಣಿಗೆಯ ಮೇಲೆ ತಮ್ಮ ಚಮತ್ಕಾರವನ್ನು ತೋರಿಸಿ ಜನರನ್ನು ಸಂತೋಷಪಡಿಸಿದರು. ಓಕುಳಿ, ಅವಭೃಥಸ್ನಾನದೊಡನೆ ಸಮಾರಂಭವು ಮುಕ್ತಾಯವಾಯಿತು. ಅದೇ ದಿನ ಸಾಯಂಕಾಲ ಪರ್ಯಾಯ ಅದಮಾರು ಮಠದ ಕಡೆಯಿಂದ ಬಡಗುಮಾಳಿಗೆ ಕಚೇರಿಯಲ್ಲಿ ಆಯಾ ವೇಷಧಾರಿಗಳಿಗೆ ಪುರಸ್ಕಾರವು ಹಂಚಲಾಯಿತು. ಈ ಎರಡು ದಿನಗಳಲ್ಲಿ ಭಗವಾನ್ ಶ್ರೀಕೃಷ್ಣನಿಗೆ ವಿಶ್ವರೂಪದರ್ಶನದ ಮತ್ತು ಗೊಲ್ಲರೂಪಿ ಶ್ರೀಕೃಷ್ಣನ ಅಲಂಕಾರವು ವಿಶೇಷವಾಗಿ ಒಪ್ಪುತ್ತಿದ್ದಿತು.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ.

O. S. 84/41

ಮುಂಡಾಸು ಈಶ್ವರ ಭಟ್ಟ— **ವಾದಿ.**
ಖಂಡಿಗೆ ಮಹಾಲಿಂಗ ಭಟ್ಟ ಕೂಡಾ
—ಪ್ರತಿವಾದಿರು.

ಸದ್ರಿ ವ್ಯಾಜ್ಯದ 4ನೇ ಪ್ರತಿವಾದಿ ಚಣೆಲ ಗಣಪತಿ ಭಟ್ಟರಿಗೆ ಈ ಮೂಲಕ ತಿಳಿಸುವುದೇನೆಂದರೆ:—

ಸದ್ರಿ ವಾದಿಯು ನಿಮ್ಮ ಮೇಲೆ ಕೂಡಾ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತನ್ಸಿ ಬಗ್ಗೆ ತಾ. 24–9–41ಕ್ಕೆ ಇಟ್ಟಿದೆ. ಆದುದರಿಂದ ಅದರಲ್ಲಿ ವ್ಯವಹರಿಸುವುದಿದ್ದರೆ ಆ ದಿವಸ 10 ಗಂಟೆಗೆ ಸರಿಯಾಗಿ ಸ್ವತಹ ಆಗಲಿ ವಕೀಲರ ಮುಖಾಂತರವಾಗಲಿ ಹಾಜರು ಆಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷ ವಿಚಾರಣೆಯಿಂದ ತೀರ್ಮಾನ ಮಾಡಲಾಗುವುದು. ತಿಳಿದಿರಲಿ.

C. S. Shastry,
Vakil.

ಪುತ್ತೂರು, ತಾ. 3—9—41.

ಮಂಗಳೂರು

ಸಂತಾಪ ಸೂಚನೆ

ಮಂಗೆಳೂರು ಡಯೋಸಿಸಿನ ಡಯೋಸಿಸ್ ಸ್ಕೌಟ್ ಸಂಘದವರು ಕಳೆದ ತಾ. ೧೫ರಂದು, ತಮ್ಮ ಜನರಲ್ ಸ್ಕೌಟ್ಸ್ ಚಾಪ್ಲೇನ್ ಆಗಿದ್ದ ರೆವರೆಂಡ್ ಫಾದರ್ ಥಾಮಸ್ ಗ್ರೇವನ್ ಡಫಿಯವರ ನಿಧನದ ಕುರಿತು ಸಂತಾಪ ಸೂಚನೆ ಮಾಡಿದರು. ಪ್ರಾತಃ ಏಳಕ್ಕೆ ಮಿಲಾಗ್ರಿಸ್ ಚರ್ಚಿನಲ್ಲಿ ಮುಂಗಳೂರಿನ ಬಿಶಪರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಮೌನ ನಡೆಸಿ ದುಃಖಪ್ರದರ್ಶನವಾಯಿತು. ನಗರದ ಸಾಮಾನ್ಯ ಎಲ್ಲಾ ಕ್ರಿಶ್ಚಿಯನ್ ಪ್ರಮುಖರೂ ಸಭೆಗೆ ಚಿತ್ತೈಸಿದ್ದರು.

ದಿವಂಗತರ ಶೀಲ-ಸೌಜನ್ಯಗಳ ಕುರಿತು ಡಯೋಸಿಸನ್ ಸ್ಕೌಟ್ ಚಾಪ್ಲೇನರು ಭಾಷಣವಿತ್ತರು. ಸಭಾಂತ್ಯಕ್ಕೆ ಮುಂಜೆ ದಿವಂಗತರ ಆತ್ಮ ಶಾಂತಿಗಾಗಿ ಪ್ರಾರ್ಥನೆ ನಡೆಯಿತು.

ಮಂಗಳೂರು ಬ್ರಹ್ಮಸಮಾಜದ ವಾರ್ಷಿಕೋತ್ಸವ

ಮಂಗಳೂರು ಬ್ರಹ್ಮ ಸಮಾಜದ ೭ನೇ ವಾರ್ಷಿಕೋತ್ಸವವು, ಇದೇ ತಾ. ೭ರಿಂದ ತಾ. ೨೦ರ ವರೆಗೆ ಒಂದು ವಾರ, ಭಜನೆ, ಪ್ರಾರ್ಥನೆ, ಸಂಕೀರ್ತನೆ, "ಸೋಶಿಯಲ್ ಗ್ಯಾದರಿಂಗ್" ವಿದ್ಯಾರ್ಥಿಗಳಿಗೆ ಉಪದೇಶ, ಸಾರ್ವಜನಿಕ ಭಾಷಣ, ರಾಜಾರಾಮ ಮೋಹನ ರಾಯರ ಪುಣ್ಯತಿಥಿಯ ಆಚರಣೆ, ಹರಿ ಕೀರ್ತನೆ ಮೊದಲಾದ ಉಪಯುಕ್ತ ಕಾರ್ಯಕ್ರಮಗಳೊಡನೆ ನಿತ್ಯವೂ ಬೆಳಿಗ್ಗೆ ಮತ್ತು ಸಂಜೆ ಜರಗಲಿದೆ. ಶ್ರೀ. ಕೆ. ಲಕ್ಷ್ಮಣ, ರಾವ್‌ಸಾಹೇಬ್, ಯಂ. ಮಂಜಪ್ಪ, ಸ್ವಾಮಿ ಧರ್ಮಾನಂದ ಇವರು ಭಾಷಣಕರ್ತರಲ್ಲಿ ಕೆಲವರು.

ತಕ್ಕಾವಿ ಸಾಲ

ಕಳೆದ ನೆರೆ ಹಾವಳಿಯಿಂದ, ಗದ್ದೆಗಳ ಮೇಲೆ ಹೊಯಿಗೆ ಬಿದ್ದು, ಅಥವಾ ಕಟ್ಟು ಪುಣಿ ವಗೈರೆ ಹಾಳಾಗಿ ಬಂಜರು ಬೀಳುವ ಸಂಭವವಿರುವ ಗದ್ದೆಗಳನ್ನು ದುರುಸ್ತಿಪಡಿಸುವ ಬಗ್ಗೆ ಬೇಕಾದ ಧನ ಸಹಾಯವನ್ನು ಸರಕಾರದವರು ತಿಳಿಸಿ ನಡೆಸಿ ಸಾಲದ ರೂಪವಾಗಿ ಒದಗಿಸಿ ಕೊಡಲು ತಯಾರಿರುತ್ತಾರಾಗಿಯೂ ತಸಿಲ್‌ದಾರ್, ಡಿಪ್ಯುಟಿ ತಸಿಲ್‌ದಾರರಿಗೆ ವರ್ಗದಾರರು ತಮಗೆ ಬೇಕಾಗುವ ಸಾಲಕ್ಕಾಗಿ ಅರ್ಜಿ ಮಾಡಿಕೊಳ್ಳಬಹುದಾಗಿಯೂ ಜಿಲ್ಲಾ ಕಲೆಕ್ಟರವರು ನಮಗೆ ತಿಳಿಸುತ್ತಾರೆ. ಆದ್ದರಿಂದ ವರ್ಗದಾರರು, ತಮಗೆ ಆವಶ್ಯವಿರುವ ಸಾಲಗಳಿಗೆ, ತಸಿಲ್‌ದಾರ್ ಪಿ ಡಿಪ್ಯುಟಿ ತಸಿಲ್‌ದಾರರಿಗೆ ಅವರ ಪಟ್ಟಾ ನಂಬ್ರ, ಸರ್ವೆ ನಂಬ್ರ, ವಿಸ್ತೀರ್ಣ, ಅಂದಾಜು ಖರ್ಚು ವಗೈರೆ ತಪಸೀಲುಗಳನ್ನು ಕೊಟ್ಟು, ಅರ್ಜಿ ಬರೆದುಕೊಳ್ಳಬೇಕಾಗಿ ಅಪೇಕ್ಷಿಸೋಣಾಗಿಯದೆ—ಎಂದು ಶ್ರೀ। ಕೆ. ಬಿ. ಜಿನರಾಜ ಹೆಗ್ಗಡೆ ಎಂ. ಎಲ್. ಎ. ಮತ್ತು ದ. ಕ. ಮಹಾಜನ ಫ್ಲಂಡ್ ರಿಲೀಫ್ ಕಮಿಟಿಯ ಗೌ। ಕಾರ್ಯದರ್ಶಿ (ಜತೆ) ಇವರು ತಿಳಿಸುತ್ತಾರೆ.

.ಅವನ ಮೈಯೆಲ್ಲಾ ನೋವು

ಅವನು ಹೊಸ ಹುರುಪುಗೊಂಡವನಂತೆ ಕ್ರುಶ್ಚನ್ ಮಾಡಿತು

ಸಂಧಿವಾತವು ತನ್ನ ಕುರುಹು ಕಾಣಿಸಿಕೊಳ್ಳದೆ ಗುಪ್ತವಾಗಿದ್ದು, ಫಕ್ಕನೆ ತಗಲುತ್ತದೆ. ಪ್ರಾರಂಭದಲ್ಲಿ, ಒಂದು ತೋಳು ಅಥವಾ ಕಾಲು ಹಿಡಿದು, ತಕ್ಕ ಚಿಕಿತ್ಸೆಯನ್ನು ಮಾಡದಿರುವಲ್ಲಿ ದೇಹದ ಎಲ್ಲಾ ಭಾಗಗಳಿಗೂ ಹರಡಿ ನೋವನ್ನುಂಟುಮಾಡುತ್ತದೆ. ಸಂಧಿವಾತದ ಬೇನೆಯು ಇವನಿಗೆ ಕಠಿಣವಾಗಿ, ಏನೂ ಕೆಲಸ ಮಾಡಲಾಗದ ಇವನ ಅನುಭವವು ಹಾಗಿದ್ದಿತು.

ಅವನು ಬರೆಯುತ್ತಾನೆ:—

"ಸಾಧಾರಣ ಹತ್ತು ತಿಂಗಳುಗಳ ಹಿಂದೆ ನಾನು ಸಂಧಿವಾತ ಮತ್ತು ನರಗಳ ಬಾವು ಬೇನೆಯಿಂದ ಬಹಳ ಬಾಧೆಗೊಂಡೆ. ದೇಹದಲ್ಲೆಲ್ಲಾ ನೋವಿದ್ದು, ಕೆಲವು ದಿನ ಹಾಸಿಗೆಯಿಂದ ಏಳ್ದು ಕೆಲಸಕ್ಕೆ ಹೋಗಲು ಸಾಧ್ಯನಾಗುತ್ತಿದ್ದಿಲ್ಲ. ಒಬ್ಬ ಸ್ನೇಹಿತನು ನನ್ನನ್ನು ನೋಡಲು ಬಂದು, ಕ್ರುಶ್ಚನ್ ಸಾಲ್ಟ್ಸ್ ಸೇವಿಸಲು ಹೇಳಿದನು. ಅವನೆಂದಂತೆ ಮಾಡಿದೆನು, ಹಾಗೂ ಅದರ ಫಲವಾಗಿ, ನೋವು ಕ್ರಮವಾಗಿ ಮಾಯವಾಗುವಂತೆ ಆಯಿತು. ಅಂದಿನಿಂದ, ತಡೆಯಿಲ್ಲದೆ ಕೆಲಸಕ್ಕೆ ಹೋಗುತ್ತಿದ್ದೇನೆ. ಕ್ರುಶ್ಚನ್ ಸಾಲ್ಟ್ಸ್‌ಗೆ ನನ್ನ ಕೃತಜ್ಞತೆ—ಹಾಗೂ ನಾನೀಗ ಹೊಸ ಹುರುಪುಗೊಂಡಿದ್ದೇನೆ." — ಎ. ಆರ್.

ದೇಹದಲ್ಲಿ ಮೂತ್ರಕ್ವಾರವನ್ನುಂಟುಮಾಡುವ ಕಶ್ಮಲ ಹೆಚ್ಚುವುದರಿಂದ ಸಂಧಿವಾತವುಂಟಾಗುತ್ತದೆ. ಕ್ರುಶ್ಚನ್ ಸಾಲ್ಟ್ಸ್‌ನಲ್ಲಿರುವ ಎರಡು ಘಟಕ ಪದಾರ್ಥಗಳಲ್ಲಿ ಮೂತ್ರ ಕ್ವಾರ ಹರಳುಗಳನ್ನು ಕರಗಿಸುವ ಸಾಮರ್ಥ್ಯವಿದೆ. ಈ ಕರಗಿದ ಹರಳುಗಳನ್ನು ಮೂತ್ರದ್ವಾರದಿಂದ ಹೊರಹಾಕುವಲ್ಲಿ ಇತರ ಪದಾರ್ಥಗಳೂ ಸಹಾಯವನ್ನಾಡುತ್ತವೆ.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. S. 203/1941

ಬರ್ನಾರ್ಡ ಫಿಲಿಫ ತೌರೋ— **ವಾದಿ.**

ಆಲೀಮುಂಮ ಕೂಡಾ— **ಪ್ರತಿವಾದಿರು.**

1ನೇ ಪ್ರತಿವಾದಿ ಆಲೀಮುಂಮ, ಮಾಳ ಅಚ್ಚಬ್ಬ ಬ್ಯಾರಿ ಎಂಬವನ, ಮುಂಗಳೂರು ತಾಲೂಕು ಪಿಲತ್ತಬೆಟ್ಟು ಗ್ರಾಮದ —ಇವರಿಗೆ.

ವಾದಿಯು ಅಡವಿನ ಅಸಲು ಬಡ್ಡಿ ಐವಜು ವಸೂಲು ಕುರಿತು ಮಾಡಿದ ಮೇಲ್ಕಂಡ ದಾವೆಯು ತಾ. 26-9-41ಕ್ಕೆ ತನ್ಸಿಗೆ ಇಟ್ಟಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪಗಳಿದ್ದರೆ ಸದ್ರಿ ವ್ಯಾದೆಗೆ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದೆಂತಲೂ, ತಪ್ಪಿದರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತೆಂತಲೂ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸೋಣಾಗಿಯದೆ.

B. Chidanand Rao,
Pleader for Plaintiff.
Puttur, 10—9—1941.



ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ

ಇದೇ ೨೨ನೇ ಸೋಮವಾರ ದಿನ ಮಹಾ ನವಮಿ ಉತ್ಸವವು ಈ ಕ್ಷೇತ್ರದಲ್ಲಿ ಆರಂಭವಾಗಿ ತಾ. ೩೦ನೇ ಮುಂಗಳವಾರ ಮುಗಿಯುವುದು. ಈ ಉತ್ಸವಕ್ಕೆ ಎಲ್ಲರೂ ಬಂದು ಗಂಧ ಪ್ರಸಾದಗಳನ್ನು ಸ್ವೀಕರಿಸಿ, ಈ ಮಹೋತ್ಸವವನ್ನು ಸಾಂಗವಾಗಿ ನೆರವೇರಿಸುವದರಲ್ಲಿ ಸಹಭಾಗಿಗಳಾಗಬೇಕಾಗಿ ವಿನಂತಿ. ೯ ದಿನಗಳಲ್ಲಿ ದೇವಿಮಹಾತ್ಮೆಯ ವಾಚಕವೂ ಇದೆ ಎಂದು ಶ್ರೀ। ಎಚ್. ಕೊರಗಪ್ಪ ಅಧ್ಯಕ್ಷ ಇವರೂ, ಶ್ರೀ। ಕೆ. ಆರ್. ಗುರು ಕಾರ್ಯದರ್ಶಿ ಇವರೂ ತಿಳಿಸುತ್ತಾರೆ.

ಸಂಚಾರದ ಕಾರ್ಯಕ್ರಮ

ಎಕ್ಸೈಜ್ ಶಾಖೆಯ ಅ। ಕಮಿಶನರ್ ರಾವ್ ಸಾಹೇಬ್ ಡಿ. ಎಸ್. ಪ್ರಸಾದರಾವ್ ಅವರು ಮಂಗಳೂರಿಗೆ ಬಂದು, ತಾ ೨೦-೨೧ರಲ್ಲಿ ಇಲ್ಲಿದ್ದು ತಾ. ೨೩ಕ್ಕೆ ಉಡುಪಿಗೆ ತೆರಳುವರು.

ಬೆಂಚ್ ಕೋರ್ಟ್ ಪ್ರೆಸಿಡೆಂಟ್

ರಾವ್ ಸಾಹೇಬ್ ಎ. ಎಲ್. ಪಿಂಟೋ, ನಿವೃತ್ತ ಡೆ। ಕಲೆಕ್ಟರ್ ಇವರು ತಿರುಗಿ ಸ್ಪೆಶಲ್ I ಕ್ಲಾಸ್ ಬೆಂಚ್ ಮ್ಯಾಜಿಸ್ಟ್ರೇಟರಾಗಿಯೂ ಸ್ಥಳೀಯ ಬೆ। ಮ್ಯಾ। ಕೋರ್ಟಿನ ಪ್ರೆಸಿಡೆಂಟರಾಗಿಯೂ ನಿರಿಸಲ್ಪಟ್ಟಿದ್ದಾರೆ.

ಮೂಲ್ಕಿ

ಭಾಷಣ

ಶ್ರೀ। ಎ. ಬಿ. ಶೆಟ್ಟಿ, ಯಂ. ಎಲ್. ಎ, ರವರು ಈಚೆಗೆ ಸ್ಥಳೀಕ ಯೂನಿಯನ್ ಕ್ಲಬ್ಬಿನ ಸಭಾಮಂದಿರದಲ್ಲಿ "ಹಿಂದೂದೇಶವೂ ಅದರ ಮುಂದಿನ ಜೀವನವೂ" ಎಂಬ ವಿಷಯವಾಗಿ ಜಲೋ ಭಾಷಣವನ್ನು ಕೊಟ್ಟರು. ಕ್ಲಬ್ಬಿನ ಕಾರ್ಯದರ್ಶಿಯವರು ಉಪಕಾರ ಸ್ಮರಿಸಿದರು.

ಶ್ರೀ ಕೃಷ್ಣಜಯಂತಿ

ಶ್ರೀ ಕೃಷ್ಣ ಜಯಂತಿ ಸಂಬಂಧ ಕಳೆದ ತಾ. ೧೫ರಲ್ಲು ಸ್ಥಳೀಕ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯಲ್ಲಿ ವ್ಯಾಖ್ಯಾನ, ಭಜನೆ, ಪೂಜೆ ಇತ್ಯಾದಿ ಕಾರ್ಯಕ್ರಮಗಳು ಜರಗಿದುವು.

ಪ್ರವೇಶೋತ್ಸವ

ಇಲ್ಲಿಯ, ಹೈ ಸ್ಕೂಲ್ ಹೊಸ ಕಟ್ಟಡ ಪ್ರವೇಶೋತ್ಸವ ಸಮಾರಂಭವು, ಮದ್ರಾಸು ಸಂಸ್ಥಾನದ ವಿದ್ಯಾಂಗದ ಡೈರೆಕ್ಟರ್ ಧೊರೆಗಳವರಿಂದ ಸುಮಾರು ಬರುವ ತಿಂಗಳ ೩ನೇ ವಾರದಲ್ಲಿ ಜರಗಲಿರುವುದೆಂದೂ ಅದೇ ಸಮಯ ಜಿಲ್ಲಾ ಬೋರ್ಡು ಮೀಟಿಂಗ್, ಉಪಾಧ್ಯಾಯರ ಸಮ್ಮೇಳನ, ವಿದ್ಯಾಪ್ರದರ್ಶನ ಇತ್ಯಾದಿಗಳು ಜರಗಲಿವೆಯೆಂದೂ ತಿಳಿದು ಬರುತ್ತದೆ.

ಬಂಗಾಳ ಮಂತ್ರಿಮಂಡಲ

ಕಲ್ಕತ್ತೆಯಲ್ಲಿ ಅಲ್ಲಿನ ಪ್ರಧಾನ ಮಿ। ಹಕ್ಕರ ಪರವಾಗಿ ಮತ್ತು ವಿರೋಧವಾಗಿ ಪ್ರದರ್ಶನಗಳು ಈಚೆಗೆ ನಡೆದ ಮೇಲೆ, ಈಗ ಆ ಮಂತ್ರಿ ಮಂಡಲದಲ್ಲಿ ಒಡಕುತೊಡಕುಗಳು ಉಂಟಾದೀತೇ ಎಂಬ ಸಂದೇಹ ಬಂದಿದೆ. ಬಂಗಾಳ ಮಂತ್ರಿಮಂಡಲದಲ್ಲಿ ಬದಲಾವಣೆಗಳೇನಾದರೂ ಆಗಬಹುದೆಂದು ತೋರುತ್ತಿದೆ. ಇದರಲ್ಲಿ ಯುರೋಪೀಯರು ಮಿ। ಹಕ್ಕರನ್ನು ಬಹಿರಂಗವಾಗಿ ಆಧರಿಸುವರೋ ಇಲ್ಲವೋ ತಿಳಿಯದು. ಈ ಪರಿಸ್ಥಿತಿಯ ವಿಷಯದಲ್ಲಿ ಬಂಗಾಳ ಎಸೆಂಬ್ಲಿಯ ಚಟುವಟಿಕೆಗಳು ನಾನಾ ಪ್ರಕಾರವಾಗಿವೆ ಎಂದು ವಾರ್ತೆ.

ವಾರ್ತಾಗುಚ್ಛ

ಫ್ರಾನ್ಸಿನಲ್ಲಿ ಅಶಾಂತಿ

ವಿಚಿಯವರು ಜರ್ಮನಿಯೊಡನೆ ಕೊನೆಯ ಸಂಧಿಗಾಗಿ ಪೇಚಾಡುವಾಗ, ಫ್ರಾನ್ಸಿನ ಅಶಾಂತಿಯೂ ಬೆಳೆಯುತ್ತಿದೆ. ಸಾವಲ, ಡೀಟ್‌ರಿಗೆ ಗುಂಡಿನೇಟು; ಮಾರ್ಸೆಲ್ ಗುಯಿಟೆನಿನ, ಮತ್ತೊಬ್ಬ ಸ್ರೆಂಚ್ ನಾಜಿ ವಾದಿಯ ಹಾಗೂ ಇನ್ನು ಮುಂದಿ ಜರ್ಮನ್ ಆಫೀಸರರ ಪ್ರಾಣಾಪಹಾರದ ಯತ್ನ; ಪ್ಯಾರಿಸ್ ಫ್ಯಾಕ್ಟರಿಯ ಕೆಲಸಗಾರರ ದ್ರೋಹಚಿಂತನೆ; ಇವು ಅಶಾಂತಿಯ ಕುರುಹುಗಳಾಗಿವೆ. ಡಾರ್ಲನರ ತಳಿಕೆಯ ಪರಿಣಾಮವಿದು; ಜನರಿಗೆ ಇತನ ಆಳಿಕೆ ಅಪ್ರಿಯವಾಗಿದೆ ಎಂಬುದರ ಸೂಚನೆ ಇದು.

ಸರ್ ಸಿಕಂದರರ ಕರ್ತವ್ಯಭಾರ

ಸರ್ ಸಿಕಂದರರು ಹಲವು ಬಗೆಯ ಕಸರತ್ತುಗಳನ್ನು ಮಾಡಬೇಕಾದಂತೆ ತೋರುತ್ತದೆ. ಒಂದು ಕಡೆ ಯೂನಿಯನಿಸ್ಟ್ ಪಾರ್ಟಿ ನಾಯಕರಾಗಿ, ಹಿಂದೂ ಮುಸ್ಲಿಮರಿಬ್ಬರಲ್ಲಿಯೂ ನಗುಮುಖವನ್ನು ತೋರಬೇಕಾಗಿದೆ; ಮುಸ್ಲಿಂ ಲೀಗಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಹಿಂದೂಗಳ ಮೇಲೆ ಹಾರಿಬಿದ್ದುಯುದ್ಧ ಪ್ರಯತ್ನಗಳಲ್ಲಿ ಅಸಹಕಾರ ವ್ರತ ಹಿಡಿಯುವುದಲ್ಲದೆ, ಸರ್ ಫಿರೋಜರಿಗೆ ಉಪದೇಶ ಮಂತ್ರವನ್ನೂ ದಲೂ ಬೇಕಾಗಿದೆ; ಮತ್ತೆ ಪಂಜಾಬಿನ ಪ್ರಧಾನರಾಗಿ, ಯುದ್ಧಕ್ಕೆ ಸಿಪಾಯಿಗಳನ್ನು ರಿಕ್ರೂಟ್ ಮಾಡಬೇಕು; ಯುದ್ಧಕ್ಕೆ ಸಾಮಗ್ರಿಗಳನ್ನು ಒದಗಿಸುವ ಕಾರ್ಯವನ್ನೂ ಪೂರೈಸಬೇಕು. ಒಬ್ಬರಿಗೆ ಪರಸ್ಪರ ವಿರೋಧವಾದ ಕೆಲಸಗಳಿಷ್ಟು, ನೋಡಬಾರದೇ?

ಕೈದು

ಸಂಯುಕ್ತ ಪ್ರಾಂತದ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟರಾದ ಶ್ರೀ। ಎಸ್. ಕೆ. ಡಿ. ಪಲಿವಾಲರನ್ನೂ ಆಗ್ರಾ ಜಿಲ್ಲಾ ಕಾಂಗ್ರೆಸ್ ಸಮಿತಿ ಸೆಕ್ರೆಟರಿ ಶ್ರೀ। ಅಲ್ಗುತ್‌ಸಿಂಗ್ ನಿರ್‌ಭಯ್‌ಯರನ್ನೂ ಡಿಫೆನ್ಸ್ ಆಕ್ಟಿನ ಮೇರೆಗೆ ಕೈದು ಮಾಡಿದೆ.

ಮಿ। ಚರ್ಚ್‌ಹಿಲ್ಲರ ಪ್ರಕಟಣೆ— ಗಾಂಧಿಜಿಯವರ ಅಭಿಪ್ರಾಯ

ಮಿ. ಚರ್ಚ್‌ಹಿಲ್ಲರು ಈಚೆಗೆ ಕಾಮನ್ಸ್ ಮಂದಿರದಲ್ಲಿ ಇಂಡಿಯದ ಕುರಿತು ಮಾಡಿದ ಭಾಷಣದ ವಿಷಯದಲ್ಲಿ "ಮಾತಿಗಿಂತ ಮೌನವೇ ಲೇಸು" ಎಂದಿರುವರು.

ಸರ್ ಅಕ್ಬರ್ ಹೈದ್ರಿಯವರ ಕರ್ತವ್ಯಭಾಗ

ಇಂಡಿಯಾ ಸರಕಾರವು ಹೊಸದಾಗಿ "ಇನ್‌ಫೊರ್‌ಮೇಶನ್ ಮತ್ತು ಬ್ರಾಡ್‌ಕಾಸ್ಟಿಂಗ್" ಶಾಖೆಯೊಂದನ್ನು ತೆರೆಯಲಿದ್ದು ಇದು ಸರ್ ಅಕ್ಬರ್ ಹೈದ್ರಿಯವರ ಕೈಕೆಳಗಿರುವುದು.

ದುರುಪಯೋಗಕ್ಕಾಗಿ ದಂಡನೆ

ಲಾಹೋರು ಮೃಗಪಕ್ಷಿಗಳ ಆಲಯದ ಕ್ಯುರೇಟರ್ ಮಿ. ಟಿ. ಡಬ್ಲ್ಯು ಡೀಕ್ಸ್ ಎಂಬವರು ಆ ಆಲಯದ ಕೆಲವು ಪಕ್ಷಿಗಳನ್ನು ಕಪರ್ದುಲಾ ಮಹಾರಾಜರಿಗೆ ರೂ. ೩೦೦ಕ್ಕೆ ಮಾರಿ, ರೂ. ೬೫೦ನ್ನು ಮಾತ್ರ ಲೆಕ್ಕದಲ್ಲಿ ಜಮೆ ಕಟ್ಟಿಕೊಂಡು ಹಾಗೆ ಉಳಿದ ಮೊತ್ತವನ್ನು ದುರುಪಯೋಗಮಾಡಿಕೊಂಡರೆಂಬ ಆರೋಪದ ಮೇಲೆ ಅವರಿಗೆ ಕೋರ್ಟ್ ಏಳುವ ತನಕ ಸಜೆ, ೫೦೦ ರೂಪಾಯಿಗಳ ಜುಲ್ಮಾನೆ ವಿಧಿಸಲಾಗಿದೆ.

ಮದ್ರಾಸ್ ಬಾಂಬರ್ ಸ್ಕ್ವಾಡರ್ನಿನಿಗಾಗಿ ವಂತಿಗೆ

"ಮದ್ರಾಸ್ ಬಾಂಬರ್ ಸ್ಕ್ವಾಡರ್ನಿನ ಬಗೆಗೆಂದು ಕಳುಹಿಸಿದ ಇತ್ತೀಚಿಗಿನ ವಂತಿಗೆಗಾಗಿ ವಂದನೆ; ಧಾರಾಳ ಪ್ರಮಾಣದ ನಿಮ್ಮ ದಾನಗಳಿಗಾಗಿ ನಾನು ಕೃತಜ್ಞನು. ಶತ್ರುಗಳೊಡನೆ ಕಾದಾಡಲು ಮದ್ರಾಸ್ ಸ್ಕ್ವಾಡರ್ನ್ ಬೇಗನೆ ಹೊರಡುವುದೆಂದು ನಾನು ಉತ್ಸಾಹಗೊಂಡಿದ್ದೇನೆ"—ಹೀಗೆಂದು "ಎಯರ್‌ಕ್ರಾಫ್ಟ್" ನಿರ್ಮಾಣದ ಮಂತ್ರಿಲೆ। ಕ। ಮೂರ್ ಬ್ರೇಜನ್, ಲಂಡನ್, ಅವರು ತಂತಿಬಿಟ್ಟಿರುವುದಾಗಿ ಪ್ರಾಂತಿಕ ಯುದ್ಧ ಸಮಿತಿಯ ಡೆ। ಸೆಕ್ರಟರಿಗಳು ತಿಳಿಸುತ್ತಾರೆ.

ಒರಿಸ್ಸದ ಕಾಂಗ್ರೆಸ್ ಪಾರ್ಟಿ

ಒರಿಸ್ಸದ ಕಾಂಗ್ರೆಸ್ ಎಸೆಂಬ್ಲಿ ಪಾರ್ಟಿಯ ಏಳು ಮಂದಿ ಆ ಪಾರ್ಟಿಯ ಸಂಬಂಧ ಕಡಿದುಕೊಂಡು ಪಂಡಿತ ಗೋದಾವರೀಸ್ ಮಿಶ್ರರ ಮುಂದಾಳತ್ವದಲ್ಲಿ ಒಂದು ಹೊಸ ತಂಡವನ್ನು ಸ್ಥಾಪಿಸಿದ್ದಾರೆ. ಕಾಂಗ್ರೆಸಿನ ಈಗಿನ ಕಾರ್ಯನೀತಿ ಅವರಿಗೆ ಸರಿತೋರದಿದ್ದುದೇ ಅವರ ಈ ಸಂಬಂಧ ತ್ಯಾಗಕ್ಕೆ ಕಾರಣ.


ಕಿರಿಗುಮಾಸ್ತೆಗೆ ಉನ್ನತ ಪದವಿ ಲಭಿಸಿತು
ಧನಿಯು ನಿನ್ನನ್ನು ಕರೆಯುತ್ತಾರೆ ಆ ಜಮಾ ಖರ್ಚುಗಳಲ್ಲಿ ನೀನು ಮಾಡಿರುವ ತಪ್ಪುಗಳಿಗಾಗಿ ನಿನ್ನ ಮೇಲೆ ಬಹಳ ಕೋಪಗೊಂಡಿದ್ದಾರೆ
ನಾನೇನು ಮಾಡಲಿ. ಈ ಡಿವಾರ್ಟ್‌ಮೆಂಟಿನಲ್ಲಿ ಕೆಲಸ ಬಹಳ ಹೆಚ್ಚಾಗಿದೆ. ಅದೂ ಅಲ್ಲದೆ ನಾನು ಎಷ್ಟು ಬಳಲಿ ಬೇಸತ್ತಿದ್ದೇನೆಂಬುದು ನಿನಗೆ ತಿಳಿದೇ ಇದೆ
ನಾನು ಬಹಳ ವಿಷಾದಿಸುತ್ತೇನೆ, ಸಾರ್. ಈಚೆಗೆ ಏಕಾಗ್ರಚಿತ್ತದಿಂದ ಕೆಲಸಮಾಡಲು ನನಗೆ ಅಸಾಧ್ಯವಾಗಿದೆ. ಯಾವಾಗಲೂ ಬಳಲಿ ಬೆಂಡಾಗಿರುತ್ತೇನೆ
ಇಂಥ ತಪ್ಪುಗಳನ್ನು ನೀನು ಇದುವರೆಗೆ ಎಷ್ಟು ಮಾಡಿರುವೆ! ಈ ದಾರಿಯೂ ನಿನ್ನನ್ನು ಮನ್ನಿಸಿರುವೆನು. ಆದರೆ ನೀನು ಜಾಗರೂಕತೆಯಿಂದ ಕೆಲಸ ಮಾಡಬೇಕು. ನಿನಗೆ ವೈಹುಷಾರಿಲ್ಲದಿದ್ದರೆ ಡಾಕ್ಟರನ್ನು ಹೋಗಿ ನೋಡು
ಡಾಕ್ಟರ ಹತ್ತಿರ
ನಾನು ನಿದ್ದೆಯಿಂದೇಳುವಾಗಲೇ ಬಳಲಿರುತ್ತೇನೆ. ಯಾವ ಕೆಲಸವನ್ನೂ ಮಾಡಲು ನನ್ನಿಂದಾಗುವುದಿಲ್ಲ
ಓಹೊ! ಏಳುವಾಗಲೇ ಬಳಲಿರುತ್ತೀರೊ? ದಿನವೆಲ್ಲಾ ನಿತ್ರಾಣವಾಗಿರುತ್ತದೆಯೊ? ಪ್ರಾತಃಕಾಲ ದೌರ್ಬಲ್ಯವೆಂದು ತೋರುತ್ತದೆ. ನೀವು ಹಗಲಿನಲ್ಲಿ ವ್ಯಯಮಾಡುವ ಜೈತನ್ಯವನ್ನು ರಾತ್ರಿ ನಿದ್ರಿಸುವಾಗ ಪುನಃಸಂಗ್ರಹಿಸುವುದಿಲ್ಲ. ಮಲಗುವಾಗ ಹಾರ್ಲಿಕ್ಸ್ ತೆಗೆದುಕೊಳ್ಳಿ. ಅನೇಕ ವ್ಯಾಧಿಪೀಡಿತರ ಅನುಭವದಂತೆ ಆದ್ರು ರಾತ್ರಿ ನಿದ್ರಿಸುವಾಗ ಶಕ್ತಿಯನ್ನೂ ಜೈತನ್ಯವನ್ನೂ ಪುನರ್ರಚಿಸುತ್ತದೆ
ಪ್ರತಿರಾತ್ರಿಯೂ ಅದೇ ರೀತಿಯಲ್ಲಿ
ಈ ಹಾರ್ಲಿಕ್ಸ್ ನನ್ನನ್ನು ಹೊಸ ಮನುಷ್ಯನನ್ನಾಗಿ ಮಾಡುತ್ತಿದೆ
ಅನಂತರ
ಧನಿಯು ನನ್ನನ್ನು ಮುಂದಿನ ತಿಂಗಳು ಹೆಡ್ ಆಫೀಸಿಗೆ ಕಳುಹಿಸುತ್ತಾರಂತೆ! ಆಹಾ! ಎಂಥಾ ಪದವಿ!
ಆ ಉನ್ನತ ಪದವಿಗೆ ನೀನು ಅರ್ಹನೇ ಸರಿಯಯ್ಯಾ!
ಆಧ್ಯಪ್ಪ ಶಾಲಿಯಯ್ಯಾ ನೀನು
(ಯೋಚಿಸುತ್ತಾನೆ) ಎಲ್ಲಾ ಹಾರ್ಲಿಕ್ಸ್‌ನ ಪ್ರಭಾವವಲ್ಲದೇ ಮತ್ತೇನು
ಹಾರ್ಲಿಕ್ಸ್‌ನ ಶೇಕಡ ನೂರರಷ್ಟು ಪುಷ್ಟಿಕರವಾಗಿರುವುದರಿಂದ ಅಲಸಿಕೆಯನ್ನು ನವಚೈತನ್ಯವಾಗಿ ಪರಿವರ್ತಿಸುತ್ತದೆ. ಅಶಕ್ತರಾಗಿರುವಾಗ ನೀವು ದಿನವಹಿ ಸೇವಿಸುವ ಆಹಾರವು ನಿಮಗೆ ಹಿಡಿಯದಿದ್ದರೂ ನಿಮ್ಮ ಶರೀರಕ್ಕೆ ಪೋಷಕವೆನ್ನುವುದನ್ನು ಮರೆಯಬೇಡಿ. ಹಾರ್ಲಿಕ್ಸ್ ಅತ್ಯಾವಶ್ಯಕವಾಗಿ ನಿಮ್ಮ ಶಕ್ತಿಯು ಕುಂದದಿರುವುದಕ್ಕೂ, ರೋಗಾವಸ್ಥೆಯಲ್ಲಿ ಗುಣಮುಖಕ್ಕೆ ಬರುವಾಗ ನೀವು ಜಾಗ್ರತೆ ಗುಣ ಹೊಂದುವುದಕ್ಕೂ, ರೋಗ ಕ್ಷಯಿಸಿದ ನಿಮ್ಮ ನರದವರಗಳನ್ನು ಪುನರ್ರಚಿಸುವುದು ಮತ್ತು ನಿಮಗೆ ನವಶಕ್ತಿಯನ್ನೂ ಜೈತನ್ಯವನ್ನೂ ಉಂಟುಮಾಡುವುದು
HORLICKS
Horlicks Mixer
ನೀವು ಅಸ್ವಸ್ಥರಾಗಿರುವಾಗಲೂ, ಗುಣಹೊಂದುತ್ತಿರುವಾಗಲೂ ಅಥವಾ ಅಯ್ತಾಸದಿಂದ ಬಳಲಿ ಬೆಂಡಾಗಿದ್ದಾಗಲೂ
ಹಾರ್ಲಿಕ್ಸ್ ಸೇವಿಸಿರಿ
ಅದು ನಿಮ್ಮನ್ನು "ಪ್ರಾತಃಕಾಲದ ದೌರ್ಬಲ್ಯ"ದಿಂದ ಕಾಪಾಡುತ್ತದೆ. ನೀವು ಚೆನ್ನಾಗಿ ನಿದ್ರಿಸುವಿರಿ. ನಿದ್ರೆಯಿಂದ ಉತ್ಸಾಹದಿಂದೇಳುವಿರಿ ಮತ್ತು ನಿಮ್ಮ ಜೈತನ್ಯವು ಪುನರ್ರಚಿತವಾಗುವುದು
H. 1654

ಕರ್ನಾಟಕ

ಮೈಸೂರಲ್ಲಿ ನವರಾತ್ರಿ ಉತ್ಸವ

ಮೈಸೂರಿನಲ್ಲಿ ನವರಾತ್ರಿ ಮಹೋತ್ಸವವನ್ನು ಎಂದಿನಂತೆ ವೈಭವದಿಂದ ನೆರವೇರಿಸಲು ಏರ್ಪಾಡುಗಳು ಬಹಳ ರಭಸದಿಂದ ನಡೆಯುತ್ತಿವೆ. ಸೆಪ್ಟೆಂಬರ್ ತಾ. ೨೨ನೇ ಪ್ರಾತಃ ೯-೩೦ ಗಂಟೆಗೆ, ಶ್ರೀಮನ್ ಮಹಾರಾಜರವರು ಸಿಂಹಾಸನಾರೋಹಣ ಮಾಡುವರು; ರಾಜಕುಮಾರರಿಂದಲೂ, ದಿವಾನರಿಂದಲೂ, ಇತರರಿಂದಲೂ ನಜರ್ ಸಮರ್ಪಿಸಲ್ಪಡುವುದು. ತಾ. ೨೯ರಲ್ಲು ಆಯುಧ ಪೂಜೆ; ಅದೇ ದಿನ ರಾತ್ರಿ ಇಂಗ್ಲೀಷ್ ದರ್ಬಾರ್, ತಾ. ೩೦ರಲ್ಲು ಜಂಬೂ ಸವಾರಿ; ಅಕ್ಟೋಬರ್ ೧ ಮತ್ತು ೨ನೇ ತಾರೀಕುಗಳಲ್ಲಿ ಅರಮನೆಯ ಕಲ್ಯಾಣ ಮಂಟಪದಲ್ಲಿ ದರ್ಬಾರ್ ನಡೆಯುವುದು.

ಕುಮಟಾ

ಕನ್ನಡ ನಾಡು ನುಡಿ, ಶಿಕ್ಷಣ ಪ್ರಸಾರ ಮತ್ತು ಔದ್ಯೋಗಿಕ ಜಟುವಟಿಕೆಗಳ ಹಿತದೃಷ್ಟಿಯಿಂದ ಇಲ್ಲೊಂದು "ಕನ್ನಡ ಕೂಟ" ಏರ್ಪಟ್ಟು, ಕಾರ್ಯಕಾರಿ ಮಂಡಲಗಳೆರಡರ ವ್ಯವಸ್ಥೆಯಾಗಿದೆ.

ಸಿದ್ದಾಪುರ

ಇಲ್ಲಿ ಸಾಹಿತ್ಯ ಸೇವಕ ಸಂಘವೊಂದರ ಆರಂಭೋತ್ಸವವನ್ನು ಶ್ರೀ। ಅ. ನ. ಕೃಷ್ಣರಾಯರು ಈಚೆಗೆ ನೇರವೇರಿಸಿದರು. ಶಿರ್ಸಿಯಲ್ಲಿ ಗಣಪತಿ ಉತ್ಸವದ ಕಾಲದಲ್ಲಿಯೂ ಶ್ರೀ। ರಾಯರು ಹಲವು ಉಪನ್ಯಾಸಗಳನ್ನು ಕೊಟ್ಟು, ಉತ್ಸವದ ಆಕರ್ಷಣೆಯನ್ನು ಹೆಚ್ಚಿಸಿದ್ದರು.

ಕಾರವಾರ

ಇಲ್ಲಿ ಮುನಿಸಿಪಾಲಿಟಿಯ ತೈವಾರ್ಷಿಕ ಚುನಾವಣೆ ಈಚೆಗೆ ನಡೆಯಿತು. ಇದರಲ್ಲಿ ಮಿ। ಎಲಿಯಂ ಡಿ'ಸೋಜಾರವರೂ, ಅವರ ಪತ್ನಿಯವರೂ ಎರಡು ಸ್ಥಾನಗಳಿಗೆ ಉಮೇದುವಾರರಾಗಿದ್ದು, ಮಿ। ಡಿ. ಸೋಜರವರು ತಮ್ಮ ಎದುರಾಳಿಯಾದ ಮಿ। ರುಜಾರಿಯೊರವರನ್ನು ಕೇವಲ ಎರಡು ಓಟುಗಳ ವ್ಯತ್ಯಾಸದಿಂದಲೂ, (ಮಿ। ಸೋಜರ ಪತ್ನಿ) ಮಿಸೆಸ್ ನೆಲ್ಲಿ ಡಿ'ಸೋಜಾರವರು, ತಮ್ಮ ನಾಲ್ಕು ಮಂದಿ ಎದುರಾಳಿಗಳನ್ನೂ ಕೇವಲ ಒಂದೇ ಒಂದು ಓಟಿನ ವ್ಯತ್ಯಾಸದಿಂದಲೂ ಸೋಲಿಸಿಬಿಟ್ಟರು. ಹೀಗೆ ಗಂಡ ಹೆಂಡಿರಿಬ್ಬರೂ ಮುನಿಸಿಪಾಲಿಟಿಯಲ್ಲಿ ಚುನಾಯಿಸಿ ಬಂದುದು ಕಾರವಾರ ಮುನಿಸಿಪಲ್ ಇತಿಹಾಸದಲ್ಲಿ ಇದೇ ಮೊದಲು.

ಕೊಡಗು

ಇಲ್ಲಿನ ಜೇನುಮೇಣದ ಪ್ರಚಾರ ಕಾರ್ಯವನ್ನು ಅಖಿಲ ಭಾರತದಲ್ಲಿ ನಡೆಸಲು ಶ್ರೀ। ಕಲಿಯಂಡ ಸೋಮಯ್ಯನವರನ್ನೂ, ಕೊಡಗಿನ ಕಿತ್ತಳೆ ಮಾರಾಟಕ್ಕೆ ತಕ್ಕ ಮಾರ್ಕೆಟುಗಳನ್ನು ಕಂಡು ಹಿಡಿಯಲು ಆಸಿ॥ ಪ್ರಚಾರಕರಾಗಿ ಶ್ರೀ। ಕನ್ನಂಡ ಪೊನ್ನಪ್ಪ, ಬಿ. ಏ. ಅವರನ್ನೂ ನೇಮಿಸಲಾಗಿದೆ.

ವಿಜಾಪುರ

ವಿಜಾಪುರ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ "ಉದಯ" ದಿನ ಪತ್ರಿಕೆಯ ಸಂಪಾದಕರೂ ಆದ ಶ್ರೀ। ಸ. ಚ. ಮಿರ್ಜಿ ಇವರನ್ನು ಈಚೆಗೆ, "ಉದಯ" ಆಫೀಸಿನಲ್ಲಿ ಭಾರತ ರಕ್ಷಣಾ ಶಾಸನದಂತೆ ಕೈದು ಮಾಡಿರುವರು. ಇವರ ಮೇಲೆ, ಆಕ್ಷೇಪ ಕಾರಣವಾದ ಒಂದು ಭಾಷಣದ ಕುರಿತು ಆರೋಪ ವಿದೆ.

ಬರ್ಮಾ ಚುನಾವಣೆ

ಪೂರ್ವದೇಶಗಳ ಪರಿಸ್ಥಿತಿಯಿಂದ ಬರ್ಮದ ಶಾಸನ ಸಭೆಯ ಚುನಾವಣೆಯ ಕಾರ್ಯ ಮುಂದೆ ಹಾಕಲಾಗಿದೆ ಎಂದು ಅಲ್ಲಿನ ಗವರ್ನರರು ತಿಳಿಸಿರುವರು.

ಶರೀರ ಲಾವಣ್ಯವೇ
ಸ್ತ್ರೀಯರು ಆಕರ್ಷಣೀಯ
ರಾಗಲು ಮುಖ್ಯ ಸಾಧನ.
ಮೈಸೂರು ಸ್ಯಾಂಡಲ್ ಸೋಪು
ಸೌಂದರ್ಯಕ್ಕೆ ಸಂಬಂಧಪಟ್ಟ ಅನೇಕ ಸಮಸ್ಯೆಗಳನ್ನು ಬಗೆಹರಿಸಿದೆ. ಸುವಾಸನಾಯುಕ್ತವಾದ ಮೈಸೂರು ಗಂಧದೆಣ್ಣೆಯಿಂದ ದಿವ್ಯವಾಗಿ ಪರಿಮಳಿತವಾಗಿರುವ ಈ ಸಾಬೂನಿನ ಉಪಯೋಗದಿಂದ ಆಪ್ಯಾಯಮಾನರಾಗುವುದು ಅತಿಸುಲಭ.
ಬೆಳಗ್ಗೆ ಎದ್ದ ಕೂಡಲೆ ಒಂದುಸಾರಿ, ರಾತ್ರಿ ಮಲಗುವುದಕ್ಕೆ ಮುಂಚೆ ಮತ್ತೊಂದು ಸಾರಿ—ಈ ರೀತಿ ಈ ಸೋಪನ್ನು ಉಪಯೋಗಿಸುತ್ತಾ ಬಂದಲ್ಲಿ ಅಂಗಸೌಷ್ಠವವೂ, ಶರೀರಲಾವಣ್ಯವೂ ಪುಷ್ಟಿಗೊಳ್ಳುವುವು.
ಎಲ್ಲ ಕಡೆಯೂ ದೊರೆಯುತ್ತದೆ
ಮೈಸೂರು ಸ್ಯಾಂಡಲ್ ಸೋಪು
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.
BANGALORE

ತಾಲೂಕು ವರ್ತಮಾನ

ಅಜೆಕಾರು

ಕಾರ್ಕಳ ತಾಲೂಕಿನ ೭-ಲ ಗ್ರಾಮಗಳಿಗೆ ಕೇಂದ್ರವಾದ ಈ ಊರಿನಲ್ಲಿ ಇದೇ ಕಳೆದ ತಾ. ೧೨ರಿಂದ "ಶುಕ್ರವಾರ ಸಂತೆ" ಜರುಗಿಸಲು ಏರ್ಪಾಡು ನಡೆದಿದೆ.

ಕೊಲ್ಲೂರು

ನಮ್ಮ ಜಿಲ್ಲೆಯ ಪ್ರಸಿದ್ಧ ಕ್ಷೇತ್ರವಾದ ಇಲ್ಲಿ ನವರಾತ್ರಿ ಮಹೋತ್ಸವವು ಇದೇ ತಾ. ೨೨ರಲ್ಲಿ ಆರಂಭವಾಗಿ, ನವಮಿ ಸೋಮವಾರ ಚಂಡಿಕಾಯಾಗ, ದಶಮಿ ಯಂದು ವಿಜಯೋತ್ಸವಾದಿಗಳು ಜರುಗಲಿವೆ.

LIFE INSURANCE

Is the one investment which in peace or war knows no depreciation. It is the only scientific means which plans with prudence and certainty against the hazards of unknown tomorrow.

EVERY PREMIUM PAID ON YOUR INSURANCE IS A STONE LAID FOR YOUR FINANCIAL WELL-BEING. YOUR INSURANCE POLICY MAKES YOU CONSCIOUS THAT YOU & YOUR DEAR ONES ARE PROTECTED AND PROVIDED FOR THE FUTURE.

Let "Popular", the successful and progressive life office of your own district, plan your future.

THE POPULAR INSURANCE CO., LTD.,
Head Office: **MANGALORE, S. I.**

ಇಂಡಿಯದ ಸ್ಥಾನಮಾನಗಳನ್ನು ಸ್ಪಷ್ಟಗೊಳಿಸಿ!

ಸರ್ ತೇಜ್ ಬಹದೂರ್ ಸಪ್ರೂ ಗಳು ಒಂದು ಪ್ರಕಟಣಾ ಪತ್ರವನ್ನು ಹೊರಡಿಸಿ, ಅದರಲ್ಲಿ ಮಿ। ಚರ್ಚ್‌ಹಿಲ್ಲರು ಇಂಡಿಯದ ಕುರಿತಾಗಿ ಪಾರ್ಲಿಮೆಂಟಿನಲ್ಲಿ ಹಾಗೆ ನುಡಿದಿರುವುದೇನೂ ಆಶ್ಚರ್ಯವಲ್ಲ ಎಂದಿದ್ದಾರೆ. ಸರಕಾರದ ಶುಷ್ಕವಾದ ಕಾರ್ಯನೀತಿಯ ವಿಚಾರದಲ್ಲಿ ವಿವರಿಸಿ, "ಬ್ರಿಟನ್-ಇಂಡಿಯಾಗಳೊಳಗಿನ ಬಾಂಧವ್ಯದ ನೆಲಗಟ್ಟು ಯಾವುದೆಂದು ಸ್ಪಷ್ಟೋಕ್ತಿಗಳಲ್ಲಿ ಬ್ರಿಟಿಶ್ ರಾಜನೀತಿಜ್ಞರು ಆಡದಿರುವುದೇ" ಇಷ್ಟೆಲ್ಲ ತಪ್ಪುಗ್ರಹಿಕೆಗಳಿಗೂ, ಇತರ ತೊಂದರೆಗಳಿಗೂ ಕಾರಣವೆಂದಿದ್ದಾರೆ.

"ಮಿ। ಅಮರಿಯವರಾಗಲೀ, ಬ್ರಿಟಿಶ್ ರಾಜನೀತಿಜ್ಞರಾಗಲೀ "ಇಂಡಿಯದ ರಾಜ್ಯರಚನೆಯನ್ನು ನಿರ್ಮಿಸುವ ಕಾರ್ಯವನ್ನು ಭಾರತೀಯರಿಗೇ ಬಿಟ್ಟಿದ್ದೇವೆ" ಎಂದು ಪದೇ ಪದೇ ನಮಗೆ ತಿಳಿಸುವಲ್ಲಿ ಫಲವೇನೂ ಇಲ್ಲ. ಇಂಡಿಯದವರಿಗೆ ಕಷ್ಟಗಳು ಯಾವುವೆಂಬುದು, ಮಿ। ಅಮರಿ ಮೊದಲಾದವರಿಗೆ ಚೆನ್ನಾಗಿ ಗೊತ್ತಿದೆ. ಆ ತೊಡಕುಗಳು ಕೆಲವಕ್ಕೆ ಬ್ರಿಟಿಷ್ ಸರಕಾರದ ಸಂಕೋಚ ದೃಷ್ಟಿಯ ವಿವೇಕರಹಿತವಾದ ಕಾರ್ಯನೀತಿಯೂ ಕಾರಣ. ಆದುದರಿಂದ, ಆ ಸಂಕೋಚ ದೃಷ್ಟಿಯ ಕಾರ್ಯನೀತಿಯನ್ನು ಬಿಡುವ ಸಮಯ ವೀಗ ಬಂದಿದೆ ಎಂದು ಮಿ। ಅಮರಿಯವರೂ, ಲಾರ್ಡ್ ಲಿನ್‌ಲಿತ್‌ಗೋರವರೂ ಸಾರ್ವಭೌಮ ಸರಕಾರಕ್ಕೆ ತಿಳಿಯಹೇಳುವ ಕಾಲವಿನ್ನೂ ವಿಳಂಬಿಸಿಲ್ಲ" ಎಂದೂ ನಿರೂಪಿಸಿದ್ದಾರೆ.

Edited and Published by B. Vittal Rau at the Kanteerava Office, Maidan North Road, Mangalore
Printed by M. Baburaya Prabhu, B. A., at the Mangalore Press, Car Street, Mangalore